ಕಲ್ಯಾಣ ಕಿರಣ

40 ವರ್ಷಗಳ ಕಾಲ ನಿರಂತರವಾಗಿ ಸಂಚರಿಸಿದ ಧರ್ಮಕ್ರಾಂತಿಯ ಧೀರಯೋಗಿಯೂ,
ಪ್ರವಚನ ಪಿತಾಮಹರು, ಕ್ರಾಂತಿಕಾರಿ ಧರ್ಮಪ್ರಸಾರಕರೂ ಆದ
ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷರಾದ ಲಿಂ|| ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿ
ಅವರ ದಿವ್ಯ ಸ್ಮರಣೆಯೊಡನೆ

ಸೆಪ್ಟೆಂಬರ್-2010 ಬೆಲೆ ರೂ-10/-



(1931-1995)

ಕೃತಜ್ಞತಾ ಪೂರ್ವಕ ನಮನಗಳು
ಶ್ರೀ ಗುರುವಿನ ಶಿವಚರಣಕೆ ನಮೋ ನಮೋ ಎಂಬೆನು
ಗುರುದೇವನ ಮಹಾತ್ಯಾಗಕೆ ನತ ಮಸ್ತಕಳಾದೆನು

ಪೂಜ್ಯರ ಶಿಷ್ಯವೃಂದ ಮತ್ತು ಭಕ್ತವೃಂದ

ಅಡಿಯ ಇಟ್ಟು ನಡೆದಲೆಲ್ಲ ದೀಪ ಹಚ್ಚಿ ಬಂದಿರಿ
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆದಿರಿ
ಗುರುದೇವ ಲಿಂಗಾನಂದ ಹೆಸರು ಅಮರವಾಗಿದೆ
ಸಚ್ಚಿದಾನಂದನ ಶುಭದೊಲುಮೆಯು ನಿಮಗಿದೆ
-ಮಾತಾಜಿ



ಗುಲಬರ್ಗಾ ನಗರದ ನೃಪತುಂಗ ಕಾಲನಿಯಲ್ಲಿ ದಿ.11-09-2010 ರಂದು ಗುರು ಬಸವಣ್ಣನವರ ಅಮೃತಶಿಲಾ ಮೂರ್ತಿಯ ಪ್ರತಿಷ್ಠಾಪನೆ



ರಾಷ್ಟ್ರೀಯ ಬಸವ ದಳ, ಬಳ್ಳಾರಿ ಇವರು ಬಸವ ಮಂಟಪದಲ್ಲಿ ದಿ.9-8-2010 ರಂದು ಪುಷ್ಯ ನಕ್ಷತ್ರದಲ್ಲಿ ಸ್ವರ್ಣಬಿಂದು ಪ್ರಾಶನವನ್ನು ಚಿಕ್ಕಮಕ್ಕಳಿಗಾಗಿ ಏರ್ಪಡಿಸಿದ್ದರು. ಸುಮಾರು 350ಮಕ್ಕಳಿಗೆ ಹಾಕಲಾಯಿತು. ಭಾವಚಿತ್ರದಲ್ಲಿ ಖ್ಯಾತ ಆಯುರ್ವೇದ ತಜ್ಞ ಡಾ.ಬಿ.ಎಸ್.ಕೆಂಡದಮಠ, ಅಧ್ಯಕ್ಷರಾದ ಪೂಜ್ಯ ಶಾರದಾ ಮಾತೆ ಮತ್ತಿತರರು ಇದ್ದಾರೆ.

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-40 | ಬಸವ ಶಕೆ -877 | ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-9 | ಸೆಪ್ಟೆಂಬರ್-2010 | ವಾರ್ಷಿಕ ಚಂದಾ 100/- ರೂ.

ಬಸವ ಭಾನುವಿನ ಕ್ರಾಂತಿ ಉಷೆ

ಓ ಕ್ರಾಂತಿ ವೀರ, ನಿಮ್ಮಯ ವಾಣಿ
ಕನ್ನಡ ನೆಲವನೇ ಕುಣಿದಾಡಿಸಿತು
ಬಸವ ತತ್ವವನ್ನೇ ಮೆರೆದಾಡಿಸಿತು
ವಿಶ್ವ ಧರ್ಮವ ಹಬ್ಬಿ ಹಸರಿಸಿತು
ಸಮತೆಯ ಧ್ವಜವ ಹಾರಿಸಿತು ॥ 1 ॥

ನಿಮ್ಮಯ ಬೋಧೆ ಬುದ್ಧಿಯನರಳಿಸಿ
ಸುಪ್ತ ಚೇತನಗಳ ಎಚ್ಚರಗೊಳಿಸಿತು
ನಿರಭಿಮಾನಿಗಳ ನರನಾಡಿಯ ಮಿಡಿಸಿ
ಧರ್ಮದ ದುಂದುಭಿ ಮೊಳಗಿಸಿತು
ಕರ್ಮದ ಜಂಜಡ ಹರಿದೊಗೆಯಿಸಿತು ॥ 2 ॥

ಸ್ತ್ರೀ ಜಗದ್ಗುರು ಪೀಠವ ಸ್ಥಾಪಿಸಿತು
ದೀನದಲಿತರ ಮೇಲ್ಲೆ ಧರ್ಮದ ಹೊನಲನು
ಹರಿಸುತ ಹೊಸ ಚೇತನವ ತುಂಬುತ ಬಂದಿತು
ವಿಶ್ವ ಧರ್ಮದ ವೇದಿಕೆ ರಚಿಸಿ
ಸಮತೆಯ ಘೋಷಣೆ ಮೊಳಗಿಸಿತು ॥ 3 ॥

ಸುಯಿಧಾನ ಸುಗ್ರಂಥ ಮಾಲೆಯ ಸೃಷ್ಟಿಸಿ
ಗ್ರಂಥ ಕುಸುಮಗಳನು ಅರಳಿಸಿತು
ಕ್ರಾಂತಿಯೋಗಿ ಬಸವಣ್ಣನ ಚಿತ್ರಿಸಿತು
ಕಲ್ಯಾಣ ಕಿರಣದ ಕಾಲುವೆ ಮೂಲಕ
ಜ್ಞಾನದ ಸುಜಲವ ಹರಿಯಿಸಿತು ॥ 4 ॥

ಧರ್ಮಕ್ರಾಂತಿಯ ಧೀರಯೋಗಿಯೇ
ಬಸವ ಧರ್ಮದ ಜ್ಞಾನಮದಕರಿಯೇ
ಗುರು ಬಸವೇಶನ ಕರುಣೆಯ ಕುಂಚವು
ಸ್ವಾಮಿ ಲಿಂಗಾನಂದರೆಂಬ ಧೀಮಂತ ಗುರುವ
ಜಗಕೆ ನೀಡಿತು, ಬಸವ ಪಥಿಕರ ಬಾಳನು ಬೆಳಗಿಸಿತು.॥ 5 ॥

- ಮಾತಾಜಿ

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಅಕ್ಟೋಬರ್ ತಿಂಗಳಿನ ಹಬ್ಬ - ಹುಣ್ಣಿಮೆ - ಉತ್ಸವ

ಗಾಂಧೀ ಜಯಂತಿ	ಅಕ್ಟೋಬರ್ -2
ಕಲ್ಯಾಣ ಕ್ರಾಂತಿ ಸಂಸ್ಮರಣೆ	ಅಕ್ಟೋಬರ್ -8
ವಚನ ಲೇಖನ ವ್ರತಾರಂಭ	ಅಕ್ಟೋಬರ್ -8
ಹರಳಯ್ಯ - ಮಧುವಯ್ಯ ಸಂಸ್ಮರಣೆ	ಅಕ್ಟೋಬರ್ -16
ಬಸವ ಧರ್ಮದ ವಿಜಯೋತ್ಸವ	ಅಕ್ಟೋಬರ್ -17

(ಅಕ್ಟೋಬರ್ 8ರಿಂದ ಪಾರಾಯಣ - ವಿಶ್ವಗುರು ಬಸವಣ್ಣ, ಅ-9 ಚನ್ನಬಸವಣ್ಣ, 10-ಅಲ್ಲಮಪ್ರಭು, 11-ಸಿದ್ಧರಾಮೇಶ್ವರ, 12-ಅಕ್ಕಮಹಾದೇವಿ, 13 -ಮಡಿವಾಳ ಮಾಚಿದೇವರ 14-ಅಕ್ಕನಾಗಲಾಂಬಿಕೆ, 15-ಕಲ್ಯಾಣ ಕ್ರಾಂತಿ, 16- ಕಲ್ಯಾಣ ಕ್ರಾಂತಿ)

ಗಾಂಧಿ ಜಯಂತಿ (2-10-2010) ನಿಮಿತ್ತ ಬೆಂಗಳೂರಿನ ಬಸವ ಗಂಗೋತ್ರಿ, ಕುಂಬಳಗೋಡಿನಲ್ಲಿ ಖ್ಯಾತ ಮೂಲವ್ಯಾಧಿ ತಜ್ಞ ಡಾ॥ ಮೆಹಬೂಬ್‌ಖಾನರಿಂದ ಉಚಿತ ಮೂಲ್ಯವಾಧಿ (ಪೈಲ್ಸ್) ಚಿಕಿತ್ಸಾ ಶಿಬಿರವನ್ನು ಏರ್ಪಡಿಸಲಾಗಿದೆ.

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 8970898205, 7760627640, 8892912123

ಸಂಪಾದಕೀಯ : - ಮಾತಾಜಿ

1. ಡಾ॥ ದೇ ಜ ಗೌ ಅವರ ಪುತ್ರ ವ್ಯಾಮೋಹ

ಎಲ್ಲರೂ ವೀರರು ಎಲ್ಲರೂ ಧೀರರು
ಕಾಳಗದ ಮುಖದಲ್ಲಿ ಕಾಣಬಾರದು
ಓಡುವ ಮುಖದಲ್ಲಿ ಕಾಣಬಹುದು.

ಎಂಬ ಧರ್ಮಪಿತ ಬಸವಣ್ಣನವರ ವಚನ ವಾಕ್ಯಗಳು ಅನೇಕ ಪ್ರಸಂಗಗಳಲ್ಲಿ ತಟ್ಟನೆ ನೆನಪಿಗೆ ಬರುತ್ತವೆ. ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ॥ ಜೆ. ಶಶಿಧರ ಪ್ರಸಾದ್ ಅವರು ವಿ.ವಿ.ಯ ಕೆಲವು ಹುದ್ದೆಗಳಿಗೆ ನೇಮಕಾತಿ ಮಾಡುವಲ್ಲಿ ಅಕ್ರಮವೆಸಗಿದ್ದಾರೆಂದು ಆರೋಪಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ತನಿಖೆಗಾಗಿ ಸಮಿತಿ ರಚಿಸಿ, ಅದು ಆರೋಪಗಳು ಸತ್ಯವೆಂದು ಕಂಡು ಬಂದು, ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಿದೆ. ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿ ಎಬಿವಿಪಿ (ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತು) ಪ್ರತಿಭಟನೆ ಮಾಡುತ್ತಿದೆ. ಇದರಿಂದ ನೊಂದುಕೊಂಡು (ವ್ಯಗ್ರರಾದ) ದೇ ಜ ಗೌ ಅವರು ಬುಧವಾರ ದಿ. 25-08-2010ರಂದು ಬೆಳಿಗ್ಗೆ 6ರಿಂದ ಸಂಜೆ 6ರವರೆಗೆ ಮೈಸೂರು ನಗರದ ಜಯಲಕ್ಷ್ಮಿ ಪುರಂನಲ್ಲಿರುವ ಶ್ರೀ ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿರುವ ಶ್ರೀ ವೆಂಕಣ್ಣಯ್ಯ ವೇದಿಕೆಯ ಮೇಲೆ ಉಪವಾಸ ಕೈಗೊಂಡಿದ್ದಾರೆ. ಇನ್ನೂ ಮುಂದೆ ಹೋಗಿ, ತಮ್ಮ ಮಗ ಶಶಿಧರ ಪ್ರಸಾದ್ ಅವರಿಗಾದ ಅನ್ಯಾಯ ಕೈಬಿಡದಿದ್ದರೆ ಆಮರಣಾಂತ ಉಪವಾಸ ಸತ್ಯಾಗ್ರಹ ಮಾಡುವುದಾಗಿಯೂ, ಭ್ರಷ್ಟ ಅಧಿಕಾರಿಗಳು - ಯಾರ್ಯಾರಿಂದ ಈ ಅಕ್ರಮ ನಡೆದಿದೆಯೋ ಅವರ ಹೆಸರನ್ನು ಬಹಿರಂಗ ಪಡಿಸಿಯೇ ಸಾಯುವುದಾಗಿ ಘೋಷಿಸಿದ್ದಾರೆ.

ಇಡೀ ಜೀವನ ಪರ್ಯಂತರ ಅಸಾಮಾನ್ಯ ಸಾಧನೆ ಮಾಡಿ ಕರ್ನಾಟಕ ಸರ್ಕಾರ ಮತ್ತು ಅನೇಕ ಸಂಘ - ಸಂಸ್ಥೆಗಳು ಕೊಡುವ ಎಲ್ಲ ಪ್ರಶಸ್ತಿ - ಪುರಸ್ಕಾರಗಳನ್ನು ಬಾಚಿಕೊಂಡಿರುವ ನಾಡೋಜ ದೇ ಜ ಗೌ ಈ ವಿಷಯದಲ್ಲಿ ತಪ್ಪು ಹೆಜ್ಜೆಯನ್ನಿಟ್ಟಿದ್ದಾರೆ.

ಬೋಧಕರ ನೇಮಕದಲ್ಲಿ ಅಕ್ರಮ ನಡೆಸಿರುವ ವಿಶ್ರಾಂತ ಕುಲಪತಿ ಪ್ರೊ.ಜಿ.ಶಶಿಧರ ಪ್ರಸಾದರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೆಲವು ಪ್ರಗತಿಪರ ಸಂಘಟನೆಗಳು ಆಗ್ರಹಿಸಿದಾಗ ತನಿಖೆಗಾಗಿ ರಂಗವಿಠಲಾಚಾರ್ ಆಯೋಗವನ್ನು ನೇಮಿಸಲಾಯಿತು. ಆಯೋಗವು ನಡೆದಿರುವ ಅಕ್ರಮಗಳನ್ನು ದಾಖಲಿಸಿತು. ಸ್ವತಃ ಶಶಿಧರ ಪ್ರಸಾದ್ ಅವರೇ ತಪ್ಪಾಗಿರುವುದನ್ನು ಒಪ್ಪಿಕೊಂಡಿದ್ದರು. ರೋಸ್ಟರ್ ಪದ್ಧತಿ ಅನುಸರಿಸದಿರುವುದನ್ನು ಕುಲ ಸಚಿವರು ಮತ್ತು ಕ್ಲರ್ಕ್ ಸಹಿತ ಒಪ್ಪಿಕೊಂಡಿದ್ದಾರೆ. ಹೀಗಿರುವಾಗ ಸದಾ ನೈತಿಕ ಮೌಲ್ಯಗಳ ಬಗ್ಗೆ ಬರೆಯುವ ಹಾಗೂ ಮಾತನಾಡುವ ಡಾ. ದೇ ಜ ಗೌ ಪುತ್ರ ವ್ಯಾಮೋಹದಿಂದ ಮಗನ ಭ್ರಷ್ಟಾಚಾರವನ್ನು ಸಮರ್ಥಿಸಿಕೊಳ್ಳುವಂತೆ ಉಪವಾಸ ಸತ್ಯಾಗ್ರಹ ಮಾಡಿರುವುದು ಹಾಸ್ಯಾಸ್ಪದವಲ್ಲವೆ? ಎಲ್ಲ ಬಣ್ಣಗಳನ್ನು ಮಸಿ ನುಂಗಿತು ಎಂಬ ಗಾದೆಯ ಮಾತಿನಂತೆ, ಹಗಲೆಲ್ಲ ಒಟ್ಟಿದ ಬಣವೆ ಒಂದು ಮಿಡುಕು ಉರಿಯಲ್ಲಿ ಬೇವಂತೆ, ಎಂಬ ವಚನ ವಾಕ್ಯದಂತೆ ದೇಜಗೌ ಅವರ ವ್ಯಕ್ತಿತ್ವಕ್ಕೆ ಚ್ಯುತಿ ತಂದಿತಲ್ಲವೆ ?

ಈ ಅಕ್ರಮವಲ್ಲಿ ತಮ್ಮ ಮಗನತ್ತ ಮಾತ್ರ ಬೊಟ್ಟು ಮಾಡಲಾಗುತ್ತಿದೆ. ಹಲವರು

ಇದರಲ್ಲಿ ಭಾಗಿಯಾಗಿದ್ದಾರೆ ಎಂಬ ದೇಜಗೌ ಅವರ ಹೇಳಿಕೆ ಅವರ ಮಗ ತಪ್ಪು ಮಾಡಿರುವುದು ಸತ್ಯ ಎಂಬುದನ್ನು ಖಚಿತ ಪಡಿಸುವುದಲ್ಲವೆ? ಭ್ರಷ್ಟಾಚಾರಿಗಳನ್ನು ಗುಂಡಿಕ್ಕಿ ಕೊಲ್ಲಿ ಎಂದು ಆವೇಶದಿಂದ ಭಾಷಣ ಮಾಡುತ್ತಿದ್ದ ದೇಜಗೌ ಅವರು ತಮ್ಮ ಮಗನೇ ಆ ಸ್ಥಾನಕ್ಕೆ ಬಂದು ನಿಲ್ಲುತ್ತಾರೆಂದು ಕನಸು ಮನಸಿನಲ್ಲೂ ಊಹಿಸಿರಲಿಕ್ಕಿಲ್ಲ. ಯಾವುದೇ ಒಂದು ಸಂದರ್ಭದಲ್ಲಿ ವ್ಯಕ್ತಿಯ ವ್ಯಕ್ತಿತ್ವ ಒರೆಗೆ ಹಚ್ಚಲ್ಪಡುತ್ತದೆ. ಹಾಗೆ ಎರಗಿದ ಸಂದರ್ಭದಲ್ಲಿ ದೇಜಗೌ ತಾವು ಅಪ್ಪಟ ಚಿನ್ನವಲ್ಲವೆಂದು ತೋರಿಸಿಕೊಂಡು ಬಿಟ್ಟರು, ತಮ್ಮ ಪುತ್ರ ವ್ಯಾಮೋಹದಿಂದ.

2. ರಾಜ್ಯಪಾಲರ ರಾಜಕೀಯ ವಾಸನೆ

ಕರ್ನಾಟಕಕ್ಕೆ ರಾಜ್ಯಪಾಲರನ್ನಾಗಿ ಕೇಂದ್ರ ಸರ್ಕಾರ ನೇಮಿಸಿದ ರಾಜ್ಯಪಾಲ ಹೆಚ್.ಆರ್. ಭಾರದ್ವಾಜರು ಜಾತಿಯಿಂದ ಬ್ರಾಹ್ಮಣ, ವೃತ್ತಿಯಿಂದ ಕಾಂಗ್ರೆಸ್ಸಿಗರು. ರಾಜ್ಯಪಾಲರದು ಸಾಂವಿಧಾನಿಕ ಹುದ್ದೆ. ವ್ಯಂಗ್ಯ ಬರಹಗಾರರೊಬ್ಬರು ಬರೆದಂತೆ, ರಾಜ್ಯಪಾಲರ ಹುದ್ದೆ ಒಂದು ವೃದ್ಧಾಶ್ರಮ. ರಾಜ್ಯ ರಾಜಕೀಯದಲ್ಲಿ ಜನಪ್ರಿಯತೆ ಕಳೆದುಕೊಂಡವರನ್ನು ಪಕ್ಷದ ಸೇವೆ ಮಾಡಿದ ಕಾರಣಕ್ಕೆ ಕೇಂದ್ರ ಸರ್ಕಾರ (ಯಾವುದೇ ಪಕ್ಷದ್ದಿರಲಿ)ವು ರಾಜ್ಯಪಾಲರನ್ನಾಗಿ ನೇಮಿಸುವುದು. (ಹಾಗೆಯೇ ವಿಧಾನ ಪರಿಷತ್ತು ಸಹ. ಕೆಲವರನ್ನು ಬಿಟ್ಟರೆ ಹೆಚ್ಚಿನವರು ರಾಜಕೀಯದಲ್ಲಿ ಮೂಲೆ ಗುಂಪಾದವರು.)

ಯಾವುದೇ ಪಕ್ಷದಲ್ಲಿ ದುಡಿದವರಾಗಿರಲಿ ಅವರು ರಾಜ್ಯಪಾಲರು, ರಾಷ್ಟ್ರಪತಿ ಮುಂತಾಗಿ ಆದ ಬಳಿಕ ಪಕ್ಷ ರಾಜಕೀಯವನ್ನು ಬಿಟ್ಟು ನಿಷ್ಪಕ್ಷಪಾತದಿಂದ ರಾಜ್ಯ, ರಾಷ್ಟ್ರದ ಹಿತಾಸಕ್ತಿಯಿಂದ ದುಡಿಯಬೇಕು. ತಮ್ಮ ಪಕ್ಷ ಪ್ರೀತಿಯ ವಾಸನೆಯನ್ನು ತೋರಿಸಿಕೊಳ್ಳಬಾರದು. ಆದರೆ ಹೆಚ್.ಕೆ.ಭಾರದ್ವಾಜ್ ಅವರು ಅತ್ಯಂತ ಸ್ಪಷ್ಟವಾಗಿ ತಾವು ಅಪ್ಪಟ ಕಾಂಗ್ರೆಸ್ಸಿಗರು ಎಂಬುದನ್ನು ಪ್ರತಿ ಹೆಜ್ಜೆಯಲ್ಲೂ ತೋರಿಸಿಕೊಳ್ಳುತ್ತಿದ್ದಾರೆ. ತಮ್ಮ ಅಂತರಂಗದ ಆಕಾಂಕ್ಷೆ ಏನೇ ಇರಲಿ ಅದನ್ನು ಮಾಧ್ಯಮದ ಮೂಲಕ ನಾಲಿಗೆ ಹರಿಯಬಿಟ್ಟು ಪ್ರಕಟಿಸುವುದು ರಾಜ್ಯಪಾಲರ ಘನತೆಗೆ ತಕ್ಕುದಾದುದಲ್ಲ.

1. ಜಾನುವಾರು ಹತ್ಯೆ ನಿಷೇಧಕ್ಕೆ ವಿರೋಧ : ಮೊದ ಮೊದಲಿಗೆ ಹೆಚ್.ಕೆ. ಭಾರದ್ವಾಜ್ ಗೋವಂಶ ಹತ್ಯೆ ನಿಷೇಧ ಕಾಯಿದೆ ಕುರಿತು ಒಳ್ಳೆಯ ಅಭಿಪ್ರಾಯ ಸೂಚಿಸಿದ್ದರು. ಪ್ರಾಣಿ ದಯಾಸಂಘದವರು, ಜೈನ ಸಂಘಟನೆಗಳವರು ಮನವಿ ಕೊಡಲು ಹೋದಾಗ ಮೆಚ್ಚುಗೆಯಿಂದ ಮಾತನಾಡಿ ಇದು ಆಗಬೇಕು, ನನ್ನದು ಸಹಮತವಿದೆ ಎಂದರಲ್ಲದೆ ಶ್ರೀ ದಯಾನಂದ ಸ್ವಾಮಿಯವರ ಹೆಸರು ಕೇಳಿ, ''ಹೋರಾಟದ ಮುಂಚೂಣಿಯಲ್ಲಿದ್ದೀರಿ. ನಾನು ಆರ್ಯ ಸಮಾಜದ ಅನುಯಾಯಿ. ನನ್ನ ಗುರು ಪೂಜ್ಯ ದಯಾನಂದ ಸರಸ್ವತಿಯವರ ಹೆಸರನ್ನಿಟ್ಟು ಕೊಂಡಿದ್ದೀರಿ. ನನಗೆ ಸಂತೋಷವಿದೆ.'' ಎಂದು ಆತ್ಮೀಯವಾಗಿ ನುಡಿದಿದ್ದರು. ಆದರೆ ನಂತರ ಪ್ಲೇಟು ಬದಲಾಯಿಸಿದರು. ಹುಟ್ಟಿನಿಂದ ಬ್ರಾಹ್ಮಣರಾಗಿರುವುದು ಮತ್ತು ಆರ್ಯ ಸಮಾಜದ ಅನುಯಾಯಿಗಳಾಗಿರುವುದು ಗೋವಂಶ ಹತ್ಯೆ ನಿಷೇಧಕ್ಕೆ ಪ್ರೋತ್ಸಾಹಕವಾಗಿತ್ತು. ನಂತರ ಕಾಂಗ್ರೆಸ್ಸಿಗರು (ಮತ್ತು ಜೆ.ಡಿ.ಎಸ್‌ನವರು) ಮುಸಲೀಮರ ತುಷ್ಟೀಕರಣ ಉದ್ದೇಶದಿಂದ ವೋಟ್ ಬ್ಯಾಂಕಿನ ಮೇಲೆ ಕಣ್ಣಿಟ್ಟು ಗೋವಂಶ ಹತ್ಯೆ ನಿಷೇಧವನ್ನು ವಿರೋಧಿಸತೊಡಗಿದರು. ಆಗ

ರಾಜ್ಯಪಾಲರ ಕಾಂಗ್ರೆಸ್ ಪ್ರಜ್ಞೆ ಜಾಗೃತಗೊಂಡಿತು. ರಾಜ್ಯಪಾಲರು ವಿರೋಧಿಸತೊಡಗಿದರಲ್ಲದೆ ಸಹಿ ಮಾಡದೆ ರಾಜ್ಯ ಸರ್ಕಾರದ ನಿರ್ಣಯವನ್ನು ರಾಷ್ಟ್ರಪತಿಗೆ ರವಾನಿಸಿದ್ದಾರೆ. ಅವೇನೇ ಇರಲಿ, ಆದರೆ ಬಹಿರಂಗವಾಗಿ ರಾಜಕೀಯ ಹೇಳಿಕೆಗಳನ್ನು ಕೊಡಲು ಆರಂಭಿಸಿದ್ದಾರೆ.

2. ಪ್ರೊ.ತಳವಾರರ ಸಾರ್ವಜನಿಕ ನಿಂದನೆ

ಆಗಸ್ಟ್ 22ರಂದು ರಾಜ್ಯಪಾಲರು ಮೈಸೂರಿನಲ್ಲಿ ನಡೆದ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಆಗ ಸಾರ್ವಜನಿಕರು ಮತ್ತು ಮಾಧ್ಯಮದವರ ಎದುರಿಗೇ ಮೈಸೂರು ವಿ.ವಿಯ ಕುಲಪತಿ ಡಾ|| ಪ್ರೊ.ತಳವಾರ ಅವರನ್ನು ದೂಷಿಸಿದರು.''ಯಾರ್‍ರೀ ನೀವು? ನನ್ನ ಸೂಚನೆಯನ್ನು ಧಿಕ್ಕರಿಸೋದು?'' ಎಂದು ನುಡಿದರು. ತಳವಾರರು ಮಾಡಿದ ತಪ್ಪೇನು?

ಬೋಧಕ ಸಿಬ್ಬಂದಿಯನ್ನು ನೇಮಕ ಮಾಡುವಾಗ ಅವರ ಅವಧಿಯಲ್ಲಿ (2003-07) ಪ್ರೊ. ಶಶಿಧರ ಪ್ರಸಾದವರು ಭ್ರಷ್ಟಾಚಾರಕ್ಕೆ ಒಳಗಾಗಿ ಹಲವಾರು ಅಕ್ರಮಗಳನ್ನು ಮಾಡಿದ್ದಾರೆ ಎಂಬ ಆರೋಪ ಎದ್ದಿತು. ಆಗ ಸರ್ಕಾರವು ಹೈಕೋರ್ಟಿನ ನಿವೃತ ನ್ಯಾಯಾಧೀಶ ರಂಗವಿಠಲಾಚಾರ್ ಸಮಿತಿಯನ್ನು ನೇಮಕ ಮಾಡಿತು. ಆ ಸಮಿತಿಯು ಅಕ್ರಮಗಳು ನಡೆದಿರುವುದು ನಿಜ ಎಂದು ಹೇಳಿತಲ್ಲದೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಶಿಫಾರಸು ಮಾಡಿತು; ಕ್ರಿಮಿನಲ್ ಮೊಕದ್ದಮೆ ಹೂಡಬೇಕೆಂದು ಸಹ ಹೇಳಿತು. ಆಗ ಸರ್ಕಾರವು ಕ್ರಮಕೈಗೊಳ್ಳಲು ಮುಂದಾಗಿ ವಿಶ್ವವಿದ್ಯಾಲಯಕ್ಕೆ ಸೂಚಿಸಿತು. ವಿಶ್ವವಿದ್ಯಾಲಯವು ಕ್ರಮ ಕೈಗೊಳ್ಳಬೇಕೆಂದು ಆಮೆಯ ಗತಿಯಲ್ಲಿ ಸಾಗಿ ಎಚ್ಚೆತ್ತಾಗ ರಾಜ್ಯಪಾಲರ ಸಚಿವಾಲಯದಿಂದ, 'ನೀವು ಹಾಗೆ ಕ್ರಮ ಕೈಗೊಳ್ಳುವಂತಿಲ್ಲ. ಆಗಿರುವ ಲೋಪವನ್ನು ಮಾತ್ರ ಸರಿಪಡಿಸಿ.' ಎಂದು ಆದೇಶ ಹೊರಡಿಸಿತು. ಇದೇ ಕಾರಣ ಮುಂದೆ ಮಾಡಿ ವಿಶ್ವವಿದ್ಯಾಲಯದವರು ಪುನಃ ತಣ್ಣಗೆ ಕುಳಿತರು.

ಆದರೆ, ಸ್ಥಳಿಯ ಹಿಂದುಳಿದ ವರ್ಗಗಳ ಸಂಘಟನೆಗಳವರು ಮತ್ತು ವಿದ್ಯಾರ್ಥಿ ಸಂಘಟನೆಗಳವರು ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಲೇಬೇಕೆಂದು ಆಗ್ರಹಿಸಿ ಹೋರಾಟ ಆರಂಭಿಸಿದರು. ಒಂದು ಸಂಘಟನೆಯವರು ಕುಲಪತಿಗಳಿಗೆ ಮನವಿ ಸಲ್ಲಿಸಲು ಬಂದಾಗ, ಅವರು ಅದನ್ನು ಸ್ವೀಕರಿಸಿ, ಪರಿಶೀಲಿಸಲಾಗುವುದು ಎಂದು ಭರವಸೆ ನೀಡಿದುದೇ ಭಾರದ್ವಾಜ್ ಸಿಟ್ಟಿಗೇಳಲು ಕಾರಣ. ಮೈಸೂರಿನಲ್ಲಿ ನಡೆದ ಕಾರ್ಯಕ್ರಮದ ಸಂದರ್ಭದಲ್ಲಿ ಎಲ್ಲರೆದುರೇ ಕುಲಪತಿಗಳನ್ನು ಅವಮಾನಗೊಳಿಸಿದ್ದಲ್ಲದೆ ''ನಿಮ್ಮ ವಿ.ವಿ ಕಾರ್ಯಕ್ರಮಗಳಿಗೆ ನಾನು ಬರುವುದಿಲ್ಲ'' ಎಂದುದಷ್ಟೆ ಅಲ್ಲದೆ, ''ಯು.ಜಿ.ಸಿಯ ಅನುದಾನ ಸಹ ನಿಲ್ಲಿಸಲಾಗುತ್ತದೆ'' ಎಂದು ಎಚ್ಚರಿಸಿದ್ದಾರೆ. ಯುಜಿಸಿ ಅನುದಾನ ಕೊಡುವುದನ್ನು ನಿಲ್ಲಿಸುವುದು ರಾಜ್ಯಪಾಲರ ಕೈಯಲ್ಲಿ ಇಲ್ಲ.

ರಾಜ್ಯಪಾಲರು ಶಶಿಧರ ಪ್ರಸಾದರ ವಿರುದ್ಧ ಕ್ರಮ ಕೈಗೊಳ್ಳದಿರಲು ಹೇಳಿದ ಕಾರಣ ತಾಂತ್ರಿಕ ಸಮಸ್ಯೆ. ಈಗಾಗಲೇ ಶಶಿಧರ ಪ್ರಸಾದ ಅವರು ನಿವೃತ್ತರಾಗಿರುವುದರಿಂದ ನಮ್ಮಿಂದ ಯಾವ ಕ್ರಮವನ್ನೂ ಕೈಗೊಳ್ಳಲು ಬರದು. ಎಂಬುದೇ ಆ ತಾಂತ್ರಿಕ ಸಮಸ್ಯೆ. ವಿ.ವಿಯ ಕಾಯ್ದೆ 8ನೇ ಸೆಕ್ಷನ್ನಿನ ಪ್ರಕಾರ ಕ್ರಮ ಕೈಗೊಳ್ಳಲು ವಿವಿ ಮತ್ತು ಸರಕಾರ ಮುಂದಾಗಿದ್ದವು. ರಾಜ್ಯಪಾಲರು ಹೇಳಿದ ತಾಂತ್ರಿಕ ಸಮಸ್ಯೆ ಕಾಯ್ದೆ ಸೆಕ್ಷನ್ನಿನ 14:7ರ ಪ್ರಕಾರ ಇತ್ತು. (ಕುಲಪತಿಗಳನ್ನು ವಜಾ ಗೊಳಿಸುವ ಕಾನೂನಿನ ಪ್ರಕಾರ) ಈ ನಿಯಮದ ಅಡಿಯಲ್ಲಿ ಕುಲಪತಿಗಳನ್ನು ವಜಾ ಮಾಡುವ ಪ್ರಶ್ನೆ ಇಲ್ಲಿಲ್ಲ. ಏಕೆಂದರೆ ಆರೋಪಿ ಆಗಲೇ ನಿವೃತ್ತರಾಗಿದ್ದಾರೆ.

ಭಾರತೀಯ ದಂಡ ಸಂಹಿತೆ ತಪ್ಪಿತಸ್ಥರಾದ ಎಲ್ಲರ ವಿರುದ್ಧವೂ ಪ್ರಯೋಗಿಸಬಹುದಾದ ಅಸ್ತ್ರ ಇದರ ಅಡಿಯಲ್ಲಿ ಭಾರತದ ರಾಷ್ಟ್ರಪತಿ ಮತ್ತು ಪ್ರಧಾನಿ ಸಹ ಬರುತ್ತಾರೆ. ಅಂದಾಗ ರಾಜ್ಯಪಾಲರ ಪರಮಾಪ್ತವಲಯದಲ್ಲಿ ಬರುವ ಶಶಿಧರ ಪ್ರಸಾದ್ ಹೊರತಾಗುತ್ತಾರೆಯೆ? ಭಾರದ್ವಾಜರು ಶಶಿಧರ ಪ್ರಸಾದ ಅವರನ್ನು ಈ ರೀತಿ ರಕ್ಷಿಸುತ್ತಿರುವುದು ಹಲವಾರು ಗುಮಾನಿಗೆ ಕಾರಣವಾಗುವುದಲ್ಲವೆ? ನೀತಿ-ನಿಯಮ ಎಲ್ಲವೂ ಭ್ರಷ್ಟಾಚಾರದ ಹೊಳೆಯ ಪಾಲಾಗುತ್ತಿರುವ ಸನ್ನಿವೇಶದಲ್ಲಿ ರಾಜ್ಯಪಾಲರ ಹುದ್ದೆಯೂ ಕಳಂಕಿತವಾಗುತ್ತಿರುವುದು ತುಂಬಾ ನೋವಿನ ಸಂಗತಿಯಲ್ಲವೆ?

3. ಮೂಢ ಸಂಪ್ರದಾಯದಿಂದ ಹೊರಬರಬೇಕು.

ಬಾಗಲಕೋಟೆಯಲ್ಲಿ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಪೀಠವು ಸ್ಥಾಪನೆಯಾಯಿತು. ಇಳಕಲ್‌ದ ಡಾ|| ವಿಜಯ ಮಹಾಂತ ಸ್ವಾಮಿಗಳು ನೂತನ ಸ್ವಾಮೀಜಿಗೆ ಚಿನ್ಮಯಾನುಗ್ರಹ ದೀಕ್ಷೆ ನೀಡಿ, ನಂತರ ಅವರ ಪಾದಪೂಜೆಯನ್ನು ಮಾಡಿದರೆಂದು ಪತ್ರಿಕೆಗಳಲ್ಲಿ ವರದಿಯಾಯಿತು. ಬೆಂಗಳೂರು ಆವೃತ್ತಿಯಲ್ಲಿ ಇಷ್ಟೇ ಬಂದಿತ್ತು. ಗೋಕಾಕ್ (ಬೆಳಗಾಂ ಜಿಲ್ಲೆ) ಆವೃತ್ತಿಯಲ್ಲಿ "ಆ ಪಾದೋದಕವನ್ನು ತಮ್ಮ ಇಷ್ಟಲಿಂಗದ ಮೇಲೆ ಹಾಕಿ ಸ್ವೀಕರಿಸಿದರು." ಎಂದು ವರದಿಯಾಗಿದೆ ಎಂದು ಗೋಕಾಕಿನಿಂದ ನನಗೆ ಫೋನ್ ಬಂದಿತು. ಕೇಳಿ ಕಸಿವಿಸಿ ಮತ್ತು ನೋವು ಆಯಿತು? ಒಂದನೆಯದಾಗಿ ಈ ಆಧುನಿಕ ಕಾಲದಲ್ಲಿ ಪಾದೋದಕ ಸ್ವೀಕಾರವು ಅಸಂಬದ್ಧ ಕ್ರಿಯೆಯಾಗಿ ತೋರಿ ಬರುತ್ತಿದೆ. ಸಂಪ್ರದಾಯ ಮಠಾಧೀಶರು ಬದಲಾವಣೆ ಮಾಡಿಕೊಳ್ಳದೆ ಯಾಂತ್ರಿಕವಾಗಿ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. 2. ಎರಡನೆಯದಾಗಿ ಗುರುವಿನ ಪಾದೋದಕವನ್ನು ಶಿಷ್ಯನು ತೆಗೆದುಕೊಳ್ಳುವುದು ಸ್ವಲ್ಪ ಸಹ್ಯವೆನಿಸಬಹುದು. ಆದರೆ ಅದೇ ಆಗ ಜಂಗಮದೀಕ್ಷೆ, ಪಟ್ಟಾಧಿಕಾರ ಪಡೆದ ಸಣ್ಣ ವಯಸ್ಸಿನ ಒಬ್ಬ ವ್ಯಕ್ತಿಯ ಪಾದೋದಕವನ್ನು ದೀಕ್ಷೆಯನ್ನು ನೀಡಿದ ಗುರು, ವಯಸ್ಸಿನಲ್ಲೂ ಹಿರಿಯರೂ ಆಗಿರುವವರು ಸ್ವೀಕರಿಸುವುದೆಂದರೇನು? ನನಗನ್ನಿಸುತ್ತದೆ. ಈ ಆಚರಣೆ 12ನೇ ಶತಮಾನದ್ದಾಗಿರದೆ ಲಿಂಗಾಯತ ಧರ್ಮವು ಸಂಸ್ಥೀಕರಣ ಗೊಳ್ಳುವಾಗ ಸೇರಿಸಲ್ಪಟ್ಟ ಆಚರಣೆ ಇರಬಹುದು ಎಂದು. (ಪೂಜ್ಯ ಲಿಂಗಾನಂದ ಅಪ್ಪಾಜಿಯವರು ಸಂಪ್ರದಾಯ ವಿರಕ್ತರ ಅನೇಕ ಆಚರಣೆಗಳನ್ನು (ನಾನು ಬಂದ ಸಮಯದಲ್ಲಿ) ಮಾಡುತ್ತಿದ್ದರು. ಉದಾ: ದಿನಕ್ಕೆ ಹಲವಾರು ಬಾರಿ ಸ್ನಾನ, ನೀರು ಕುಡಿಯಬೇಕಾದರೂ ಸ್ನಾನ, ಪ್ರಯಾಣದಲ್ಲಿ ಬಾಯಾರಿಕೆಯಾಗಿ ತುಂಬಾ ತೊಂದರೆಯಾಗುತ್ತಿತ್ತು. ಅದರಂತೆ, ನನಗೆ ಜಂಗಮ ದೀಕ್ಷೆ ಕೊಟ್ಟ ನಂತರ ಪಾದಪೂಜೆ ಮಾಡಿದರು. ನನಗೆ ಗಾಬರಿಯಾಯಿತು. 1996ರಲ್ಲಿ ಸುದೀರ್ಘವಾದ ಚರ್ಚೆಯನ್ನು ಶರಣರ ಸಭೆಯಲ್ಲಿ ಮಾಡಿ, ತಿದ್ದುಪಡಿ ತಂದು ಕೆಲವಾರು ಬದಲಾವಣೆ ಮಾಡಿದ್ದೇವೆ.ಪಾದೋದಕದ ಬದಲು ಲಿಂಗೋದಕದ ಮೂಲಕ, ಹಸ್ತೋದಕದ ಮೂಲಕ ಅನುಗ್ರಹ ನೀಡಬೇಕೆಂದು ನಿರ್ಣಯಿಸಲಾಗಿದೆ.)

ದೀಕ್ಷೆಯಾದ ಬಳಿಕ ಶಿಷ್ಯನೇ ಕೃತಜ್ಞತೆಯಿಂದ ಗುರುಗಳ ಪಾದಪೂಜೆ ಮಾಡಿದರೆ ಅದಕ್ಕೊಂದು ಅರ್ಥವಿದೆ. ಪೀಠಾರೋಹಣ ಅಥವಾ ಜಂಗಮ ದೀಕ್ಷೆಯಾದ ಬಳಿಕ ದೀಕ್ಷೆ ನೀಡಿದವರೇ ಮಾಡದೆ, ಬೇರೆ ಭಕ್ತರ ಕೈಯಿಂದ ಜಂಗಮ (ಪಾದ) ಪೂಜೆ ಮಾಡಿಸಬಹುದು.

3. ಪಾದಪೂಜೆ ಮಾಡಿ ನಂತರ ಆ ಪಾದೋದಕವನ್ನು ತಮ್ಮ ಇಷ್ಟಲಿಂಗದ ಮೇಲೆ ಹಾಕಿ ಸ್ವೀಕರಿಸುವುದು ಇನ್ನೂ ದೊಡ್ಡ ತಪ್ಪು (ವಿರಕ್ತ ಸ್ವಾಮಿಗಳ ಪಾದಪೂಜೆಯನ್ನು ಭಕ್ತರು

ಮಾಡುತ್ತಾರೆ ಎಂದುಕೊಳ್ಳುವ. ಆ ಪಾದೋದಕವನ್ನು ಅಂದರೆ ತಮ್ಮದೇ ಪಾದೋದಕವನ್ನು ತಾವು ಪೂಜಿಸುವ ಇಷ್ಟಲಿಂಗದ ಮೇಲೆಯೇ ಹಾಕಿ ಸ್ವೀಕರಿಸುವ ವಿಲಕ್ಷಣ ಪದ್ಧತಿಯನ್ನು ಕೆಲವರು ಅನುಸರಿಸುತ್ತಾರೆ.) ಇಷ್ಟಲಿಂಗವು ಸೃಷ್ಟಿಕರ್ತ ಲಿಂಗದೇವನ ಕುರುಹು; ಅದರ ಮೇಲೆ ಪಾದೋದಕ ಹಾಕುವುದು ತಪ್ಪು ಎಂದು ನನ್ನ ಸ್ಪಷ್ಟ ಅಭಿಪ್ರಾಯ. ಗುರು -ಜಂಗಮರು, ಶರಣರು ಅನುಗ್ರಹ ನೀಡಲು ಲಿಂಗೋದಕ -ಇಷ್ಟಲಿಂಗದ ಮೇಲೆ ತೆಗೆದ ತೀರ್ಥ, ಹಸ್ತೋದಕ -ಲಿಂಗಪೂಜೆ ಮಾಡಿ ತೀರ್ಥ ತೆಗೆಯಲು ಅವಕಾಶವಿಲ್ಲದಾಗ ಕೈಗೆ ವಿಭೂತಿ ಧರಿಸಿ, ಮಂತ್ರಜಪ ಮಾಡಿ, ನೀರಲ್ಲಿ ಬೆರಳನ್ನದ್ದಿ ತೆಗೆದಾಗ ದೊರೆಯುವ ಪವಿತ್ರ ಜಲ-ಇವೇ ಸಾಕು. ಜನಪ್ರಿಯತೆ, ಪ್ರಚಾರ ಪಡೆಯುವ ಹುಚ್ಚಿನಿಂದ ಮಠಾಧೀಶರು ತೀರಾ ಅತಿರೇಕದಿಂದ ವರ್ತಿಸುವುದು ಸರಿಯಲ್ಲ ಎಂದು ಕಳಕಳಿಯಿಂದ ಹೇಳಬಯಸುತ್ತೇನೆ. ಅಂಧ ಮತ್ತು ಶುಷ್ಕ ಸಂಪ್ರದಾಯಗಳಲ್ಲಿ ಬದಲಾವಣೆ ಅಗತ್ಯವಿದೆ.

ಸಮಸ್ಯೆ ? - ಸಮಾಧಾನ !

✉ ನಾಗರಾಜ ನಿಂಬರ್ಗಿ, ಫರತಾಹಬಾದ್, ಗುಲಬರ್ಗ ಜಿಲ್ಲೆ

1.? ದಿ.5-9-2010ರಂದು ಟಿ.ವಿ.9ದಲ್ಲಿ ಪೂಜ್ಯ ಪೇಜಾವರ ಶ್ರೀಗಳ ಸಂದರ್ಶನವಿತ್ತು. ಅವರು ಮಾತನಾಡುತ್ತ ಬಸವಣ್ಣನವರು ಸಹ ಎಲ್ಲ ಜಾತಿಯ ಜನರ ಜೊತೆ ಕುಳಿತು ಸಹಪಂಕ್ತಿ ಭೋಜನ ಮಾಡುತ್ತಿರಲಿಲ್ಲ ಎಂದರು. ಮತ್ತು ದಲಿತರು ಹಿಂದು ಧರ್ಮದಲ್ಲಿ ಇರಬೇಕು. ಅದಕ್ಕಾಗಿ ವೈಷ್ಣವ ದೀಕ್ಷೆ ಕೊಡುತ್ತೇವೆ ಅವರಿಗೆ ಮಂದಿರದಲ್ಲಿ ದರ್ಶನಕ್ಕೆ ಅವಕಾಶವಿರುತ್ತದೆ ಪೂಜೆಗೆ ಇಲ್ಲ. ಎಂದರು. ಈ ಬಗ್ಗೆ ನಿಮ್ಮ ಅಭಿಪ್ರಾಯ?

★ ಗುರು ಬಸವಣ್ಣನವರು ಮಹಾಮನೆಯಲ್ಲಿ ನಿತ್ಯ ದಾಸೋಹ, ಸಹ ಪಂಕ್ತಿ ಭೋಜನ ಏರ್ಪಡಿಸಿದರು. ತಾವೂ ಭಾಗಿಯಾಗುತ್ತಿದ್ದರು. ಕಂಬಳಿನಾಗಿದೇವ ಎಂಬ ದಲಿತ ಶರಣನ ಮನೆಗೆ ಹೋಗಿ ಪ್ರಸಾದ ಸ್ವೀಕರಿಸಿದರು. ಒಕ್ಕುದ ಕೊಂಬೆನವರಲ್ಲಿ ಕೂಸ ಕೊಡುವೆನವರಿಂಗೆ ಎಂದು ನಿಯಮವನ್ನೇ ಹಾಕಿದ್ದಾರೆ. ಡೋಹಾರ ಕಕ್ಕಯ್ಯನವರಲ್ಲಿ ಬೇಡಿ ಪ್ರಸಾದ ಪಡೆದರು.

ವೈಷ್ಣವ ದೀಕ್ಷೆ ನೀಡಿ ಪೂಜ್ಯ ಪೇಜಾವರ ಶ್ರೀಗಳು ಶೂದ್ರ, ಅಸ್ಪೃಶ್ಯರನ್ನು ಕೃಷ್ಣ ಭಕ್ತರನ್ನಾಗಿ ಮಾಡುವ ಉದ್ದೇಶ ಹೊಂದಿದ್ದಾರೆಯೇ ವಿನಾ ಸಮಾನತೆಯನ್ನು, ಗುರುತ್ವವನ್ನು, ಪೂಜೆಯ ಹಕ್ಕುಗಳನ್ನು ಕೊಡುವ ಅಪೇಕ್ಷೆ ಹೊಂದಿಲ್ಲ. ಗುರು ಬಸವಣ್ಣನವರ ವೈಶಿಷ್ಟ್ಯ ಇರುವುದು ಇಲ್ಲಿಯೆ! ಗುರು, ಜಂಗಮರಾಗುವ, ಮಠ-ಪೀಠಾಧೀಶರೂ ಆಗುವ ಅವಕಾಶವನ್ನು ಬಸವ ಧರ್ಮ ದಯಪಾಲಿಸುತ್ತದೆ. ಇಲ್ಲಿ ಸಂಪೂರ್ಣ ಸಮಾನತೆ ಇದೆ.

2.? ಪೇಜಾವರ ಶ್ರೀಗಳು ದಲಿತರ ಕೇರಿಯಲ್ಲಿ ಸಂಚರಿಸುತ್ತಾರೆ. ಮಾದಾರ ಚನ್ನಯ್ಯ ಸ್ವಾಮಿಗಳು ಬ್ರಾಹ್ಮಣರ ಕೇರಿಗೆ ಬಂದಾಗ ಅವರು ಅದ್ದೂರಿ ಸ್ವಾಗತ ಮಾಡಿ, ಪಾದಪೂಜೆ ಮಾಡಿದ್ದಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯ?

★ ಇದು ಒಳ್ಳೆಯ ಬೆಳವಣಿಗೆ. ಜಾತೀಯತೆ, ಅಸ್ಪೃಶ್ಯತೆಗೆ ಕಾರಣ ತಾವು, ತಮ್ಮ ಶಾಸ್ತ್ರಗಳು ಎಂಬ ಅರಿವು ಬ್ರಾಹ್ಮಣರಲ್ಲಿ ಮೂಡುತ್ತಿದೆ. ಮತಾಂತರದ ಪಿಡುಗಿನಿಂದ ಹಿಂದು ಪಾರಾಗಬೇಕಾದರೆ ಮೇಲ್ಜಾತಿಯವರಲ್ಲಿ ತಿಳುವಳಿಕೆ ಮೂಡಬೇಕಾಗಿದೆ. ಉಭಯ ಶ್ರೀಗಳ ಪಯತ್ನವನ್ನು ಅಭಿನಂದಿಸೋಣ.



ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ
ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಒಂಬತ್ತನೆಯ
ಕಲ್ಯಾಣ ಪರ್ವ
2010ರ ಅಕ್ಟೋಬರ್ 20, 21 ಮತ್ತು 22 ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 23ನೆಯ ಶರಣ ಮೇಳವು ಇದೇ 2010ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ
ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1, 2 ಮತ್ತು 3ರಂದು ಮೊಟ್ಟ ಮೊದಲನೆಯ ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. "ಕಾಯಕವೇ ಕೈಲಾಸ" ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು ಪ್ರತಿ ವರ್ಷ "ಕಲ್ಯಾಣ ಪರ್ವ"ವನ್ನು ನಡೆಸಲಾಗುತ್ತಿತ್ತು. ಆರನೆಯ ಕಲ್ಯಾಣ ಪರ್ವವನ್ನು 2007ನೆಯ ಇಸವಿಯ ಮೇ1,2 ಮತ್ತು 3ರಂದು ನಡೆಸಲಾಯಿತು. ಗಾಳಿ ಮತ್ತು ಮಳೆಯ ಕಾರಣ ಸಮಯವನ್ನು ಬದಲಾಯಿಸಿ 9ನೆಯ ಕಲ್ಯಾಣ ಪರ್ವವನ್ನು 2010 ರ ಅಕ್ಟೋಬರ್ 20, 21 ಮತ್ತು 22 ರಂದು ಏರ್ಪಡಿಸಲಾಗುತ್ತಿದೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು -ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ. ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು

ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. "ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು" ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಅಕ್ಟೋಬರ್ 19ರ ರಾತ್ರಿಯಿಂದ ಅಕ್ಟೋಬರ್ 23 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ)ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು : 1000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು : 500 ರೂ   5. ಸ್ವಾಗತ ಸಮಿತಿ ಸದಸ್ಯತ್ವ : 300 ರೂ
6. ಪ್ರತಿನಿಧಿ ಶುಲ್ಕ : 150 ರೂ.

ಒಂದೊಂದು ಹೊತ್ತಿನ ದಾಸೋಹ ವೆಚ್ಚ ಸಹ ಕೊಡಬಹುದು.

ಅನ್ನ ದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿವಿಧ ಯೋಜನೆಗಳು

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ.21-12-2001 ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 3 ಎಕರೆ ಜಮೀನನ್ನು ಖರೀದಿಸಲಾಯಿತು. ಪುನಃ ಹದಿನೇಳೂವರೆ ಎಕರೆ ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಶರಣರು ಮುಕ್ತಾತ್ಮರಾದ ಕಾರಣ ಅವರು ಶರೀರಧಾರಿಗಳಾಗಿ ಬರುವುದಿಲ್ಲ; ಅವರ ಸಂದೇಶಗಳು ಪುನಃ ಪ್ರಚಾರಗೊಳ್ಳುತ್ತವೆ. ಅವರ ಸಂಕಲ್ಪಗಳು ಕಲ್ಯಾಣ ಕ್ರಾಂತಿಯಿಂದಾಗಿ ಅಪೂರ್ಣವಾಗಿ ಉಳಿದಿದ್ದವು, ಈಗ ಪೂರ್ಣಗೊಳ್ಳುವ ಕಾಲ ಬರುತ್ತದೆ ಎಂಬುದೇ ಅವರ ಸಂಕಲ್ಪದ ಮರ್ಮ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ಕಾಣಿಕೆ ನೀಡುವವರಿಗೆ ಅವಕಾಶವಿದೆ.

ಕಲ್ಯಾಣ ಪರ್ವ ಉತ್ಸವ ಸಮಿತಿ, ಬಸವ ಧರ್ಮ ಪೀಠ, ಬಸವ ಮಹಾಮನೆ, ಬಸವ ಕಲ್ಯಾಣ
-585327, ಜಿಲ್ಲೆ-ಬೀದರ್
☎ :08481 -251921/252856
9663385657, 9480497346

ಭಾಗ-27 - ಮಾತಾಜಿ

ಬಸವ ವಚನಾಮೃತ

462. ಮೌನವೇ ಉತ್ತರ

ಅಹುದೆಂದರಿಯೆ, ಆಗದೆಂದರಿಯೆ,
ಆದಿ ಪಥವ ತೋರಲರಿಯೆ
ಸತ್ಯವನರಿಯೆ, ಸಹಜವನರಿಯೆ,
ಸಜ್ಜನ ಶುದ್ಧವ ಮುನ್ನವೆ ಅರಿಯೆ!
ನಿಮ್ಮ ಶರಣರು ಒಕ್ಕುದನುಂಡಿಪ್ಪೆ ಲಿಂಗದೇವಾ. - ಬ.ವ.ದೀ.460

ಈ ವಚನವು ಒಂದು ವಿಶೇಷ ಭಾವವನ್ನು ವ್ಯಕ್ತಪಡಿಸುತ್ತಿದೆ. ಏಕೋ ಗುರು ಬಸವಣ್ಣನವರು ಮೌನಿಯಾಗಿ ಏನೊಂದು ಉತ್ತರವನ್ನು ಕೊಡಲು ಬಯಸದೆ ಇರುವ ಮನೋಭಾವ ತೋರ್ಪಡಿಸುತ್ತಿದ್ದಾರೆ.

ಇಲ್ಲಿ ಗೌತಮ ಬುದ್ಧನ ಒಂದು ಪ್ರಸಂಗದ ನೆನಪಾಗುತ್ತದೆ. ಒಮ್ಮೆ ಒಬ್ಬ ಬ್ರಾಹ್ಮಣ ವಿದ್ವಾಂಸ ಬುದ್ಧನ ಬಳಿಗೆ ಬರುತ್ತಾನೆ. ನಾನಾ ಆಕಾರಗಳುಳ್ಳ ನಾನಾ ಚರಿತ್ರೆಯುಳ್ಳ ವ್ಯಕ್ತಿಗಳನ್ನು ದೇವರೆಂದು ಪೂಜಿಸುವ ಬಹುದೇವತೋಪಾಸನೆಗೆ ಹೊರತಾದ ನಿರಾಕಾರ ತತ್ವವನ್ನು ಬುದ್ಧನು ಬೋಧಿಸುವುದರಿಂದ ವೈದಿಕರು ವ್ಯಗ್ರರಾಗಿರುತ್ತಾರೆ. ಅವರ ಪ್ರತಿನಿಧಿಯಾಗಿ ಈತ ವಾದಕ್ಕೆ ಬಂದಿರುತ್ತಾನೆ. ಆಗ ಬ್ರಾಹ್ಮಣ ವಿದ್ವಾಂಸನು ಕೆಲವು ಲಕ್ಷಣಗಳನ್ನು ಹೇಳಿ; ಇದು ದೇವರಲ್ಲವೆ? ಎಂದಾಗ ಬುದ್ಧ ಮಾತನ್ನೇನೂ ಆಡದೆ ಅಲ್ಲ ಎಂದು ತಲೆಯಾಡಿಸುತ್ತಾನೆ. ಬ್ರಾಹ್ಮಣನು ಹಲವಾರು ದೇವತೆಗಳನ್ನು ವರ್ಣಿಸಿದಾಗಲೂ ಬುದ್ಧನು ಅದು ದೇವರಲ್ಲ ಎಂದು ತಲೆ ಅಲ್ಲಾಡಿಸುತ್ತಾನೆ.

ಈ ಪ್ರಸಂಗವನ್ನು ಉಲ್ಲೇಖಿಸಿ ಕೆಲವು ವಿದ್ವಾಂಸರು ಬುದ್ಧನು ನಿರೀಶ್ವರವಾದಿ, ಸೃಷ್ಟಿಕರ್ತ ಪರಮಾತ್ಮನನ್ನು ಒಪ್ಪುವುದಿಲ್ಲ, ಎಂದು ಹೇಳುತ್ತಾರೆ. ಮತ್ತೆ ಕೆಲವರು ವಿದ್ವಾಂಸರು ದೇವತೆಗಳು ದೇವರು ಅಲ್ಲ ಎಂದು ನಿರಾಕರಿಸಿದ ಮಾತ್ರಕ್ಕೆ ನಿಜವಾದ ದೇವರನ್ನು ನಿರಾಕರಿಸಿದಂತೆ ಆಗದು. ಬುದ್ಧನ ದೇವರನ್ನು ಕುರಿತಾದ ಮೌನವನ್ನು ನಿರೀಶ್ವರವಾದ ಎನ್ನಲು ಬರದು ಎನ್ನುತ್ತಾರೆ. ವಾದಕ್ಕೆ ಬಂದವರು ತತ್ವವನ್ನು ತಿಳಿದುಕೊಳ್ಳಬೇಕೆಂದು ಬರದೆ, ಜಗಳವಾಡಲಿಕ್ಕೆ ಬಂದಾಗ ಅಂತಹವರ ಜೊತೆ ಚರ್ಚೆ ಮಾಡಿ ಫಲವಿಲ್ಲ ಎಂಬ ಮನೋಭಾವ ಜ್ಞಾನಿಗಳದ್ದು. ಈ ಮನೋಭಾವವನ್ನು ಇನ್ನೊಂದು ವಚನದಲ್ಲಿ (ಬ.ವ.ದೀ.445) ಸಹ ಕಾಣುತ್ತೇವೆ.

ಇಲ್ಲೊಬ್ಬ ವಾದಕ್ಕೆ ಬಂದಿದ್ದಾನೆ. ಅವನ ಉದ್ದೇಶ ಜಗಳವಾಡುವುದೇ ವಿನಾ ತತ್ವವನ್ನು ತಿಳಿಯುವುದಕ್ಕಲ್ಲ. ಬಹುಶಃ ಅಂಥವನಿಗೆ ಗುರು ಬಸವಣ್ಣನವರು:

"ಅಯ್ಯಾ, ಇದು ಅಹುದು ಎಂಬುದೂ ನನಗೆ ತಿಳಿಯದು. ಅಲ್ಲ ಎಂಬುದು ತಿಳಿಯದು. ನಾನು ನಿಜವಾದ ಪಥವನ್ನೂ ತೋರಿಸಲಾರೆ. ಸತ್ಯವನ್ನೂ ಅರಿಯೆ. ಸಹಜತೆಯನ್ನೂ ಅರಿಯೆ. ಸಜ್ಜನಿಕೆ, ಶುದ್ಧಿ ಮುಂತಾದ ಆಚಾರ ಸಂಹಿತೆಯನ್ನೂ ಮೊದಲೇ ಅರಿಯೆ! ಲಿಂಗದೇವನ ಶರಣರು ಕೊಡುವ ಜ್ಞಾನ ಪ್ರಸಾದವನ್ನು ಸ್ವೀಕರಿಸಿ ಸುಖಿಯಾಗಿರುತ್ತೇನೆ." ಎಂದು ಉತ್ತರವನ್ನು ಕೊಟ್ಟಿರಬಹುದು ಎನಿಸುತ್ತದೆ.

463. ಶರಣರ ಕಿಂಕರ

ಆವನಾದಡೇನು ಶ್ರೀ ಮಹಾದೇವಂಗೆ ನೆನೆವನ
ಬಾಯ ತಂಬುಲವ ಮೆಲುವೆ. ಬೀಳುಡುಗೆಯ ಹೊದೆವೆ

ಪಾದರಕ್ಷೆಯ ಕಾಯ್ದು ಬದುಕುವೆ, ಲಿಂಗದೇವಾ. - ಬ.ವ.ದೀ.461

ನೆಮ್ಮದಿಯ ಬದುಕು ಯಾವುದು? ಐಶ್ವರ್ಯದ ಮಧ್ಯೆ, ಅಧಿಕಾರದಲ್ಲಿ ಬದುಕುವುದೆ? ಇಲ್ಲ, ಗುರು ಬಸವಣ್ಣನವರ ಪ್ರಕಾರ ಯಾರು ಪರಮಾತ್ಮನ ಧ್ಯಾನ, ಚಿಂತನೆಯಲ್ಲಿ ಇರುವರೋ ಅಂಥ ಸಾತ್ವಿಕರ ಬಳಿ ಸೇವೆಯನ್ನು ಮಾಡುತ್ತ, ಅವರು ಕೊಡುವ ಪ್ರಸಾದ (ಊಟ)ವನ್ನುಂಡು, ಅವರು ತೊಟ್ಟು ಬಿಟ್ಟ ಬಟ್ಟೆಗಳನ್ನು ಉಟ್ಟು, ಅವರ ಮನೆಯಲ್ಲಿ ಪಾದರಕ್ಷೆಯನ್ನು ಕಾಯ್ದುಕೊಂಡು ಇರುವುದು ಅತ್ಯಂತ ಸಂತೃಪ್ತ ಜೀವನ.

464. ಶರಣರ ಸೇವಕ

ಒಂದುವನರಿಯದ ಸಂದೇಹಿ ನಾನಯ್ಯ;
ನಂಬುಗೆಯಿಲ್ಲದ ಡಂಭಕ ನಾನಯ್ಯಾ;
ನಿಮ್ಮ ನಂಬಿದ ಶರಣರ ಡಿಂಗರಿಗ ನಾನು ಲಿಂಗದೇವಾ. - ಬ.ವ.ದೀ.462

ಒಬ್ಬ ವ್ಯಕ್ತಿ ಹೆಚ್ಚಿನ ಜ್ಞಾನಿ ಅಲ್ಲದಿರಬಹುದು. ಅವನಲ್ಲಿ ಧರ್ಮ, ದೇವರು ಕುರಿತು ಸಂದೇಹಗಳಿರಬಹುದು. ಅವನಲ್ಲಿ ದೃಢವಾದ ನಂಬಿಕೆಯೂ ಇಲ್ಲದೆ ಅವನು ಡಾಂಭಿಕನಾಗಿರಬಹುದು. ಚಿಂತೆಯಿಲ್ಲ. ಇಂಥವನಿಗೆ ದೇವರ ಕೃಪೆಗೆ ಪಾತ್ರವಾಗುವುದೋ ಇಲ್ಲವೋ ಎಂಬ ಆತಂಕಬೇಡ. ಲಿಂಗದೇವನ ಪ್ರತಿನಿಧಿಗಳಾದ ಶರಣರ ಸೇವಕನಾಗಿಬಿಟ್ಟರೆ ಅವರ ಪುಣ್ಯದಿಂದ ದೇವನ ಕೃಪೆ ಲಭ್ಯವಾಗದಿರದು.

465. ಕಿಂಕರತ್ವದಲ್ಲೇ ಪರಮಾನಂದ

ಬಿಡದೆ ಬಾಗಿಲ ಎಂಜಲ ಕಾಯ್ದಿಪ್ಪೆನು; ಕಿಂಕರನು;
ಕಿಂಕರರ ಮನೆಯಲ್ಲಿ ಕಿಂಕಲವನು ಆನು ಹಾರುತಿಪ್ಪೆನು.
ನಮ್ಮ ಲಿಂಗದೇವನ ಶರಣರ ಒಕ್ಕು ಮಿಕ್ಕುದನುಂಬ ಕಿಂಕರ ನಾನು!
- ಬ.ವ.ದೀ.463

ಶರಣರ ಮನೆಯಲ್ಲಿ ಪ್ರಸಾದ ಲಭ್ಯವಾಗುವುದು ಒಂದು ಪರಮಭಾಗ್ಯ. ಶರಣರ ಮನೆಯ ಪ್ರಸಾದಕ್ಕಾಗಿ ಬಾಗಿಲನ್ನು ಕಾಯ್ದುಕೊಂಡಿರುತ್ತೇನೆ. ಅದು ಯಾವಾಗ ಲಭ್ಯವಾಗುವುದೋ ಎಂಬ ಕಾತುರ. ಶರಣರು ಒಕ್ಕ ಮತ್ತು ಮಿಕ್ಕ ಪ್ರಸಾದಕ್ಕಾಗಿ ಹಂಬಲಿಸುವವನು ನಾನು.

ಶರಣರ (ಮನೆಯ) ಪ್ರಸಾದಕ್ಕಾಗಿ ಪರಸ್ಪರ ಶರಣ ಬಂಧುಗಳು ಹಂಬಲಿಸಬೇಕು ಎಂಬ ಭಾವವನ್ನು ಪುನಃ ಪುನಃ ಧರ್ಮಪಿತರು ಹೇಳುತ್ತಾರೆ. ಇದರ ಉದ್ದೇಶ ಶರಣ ಬಂಧುಗಳಲ್ಲಿ ಸಹ - ಭೋಜನ ನಡೆಯಬೇಕು. ದೀಕ್ಷೆಯನ್ನು ಪಡೆದುಕೊಂಡಾನಂತರ ನವ ದೀಕ್ಷಿತರನ್ನು ಹಳಬರು ಕರೆದು ಉಣ್ಣಿಸಬೇಕು ಎಂಬುದಾಗಿದೆ.

ಬಾಗಿಲ ಕಾಯ್ದಿಪ್ಪೆ ಎಂಬ ಮಾತು ವಿಶೇಷಾರ್ಥವನ್ನು ಕೊಡುತ್ತದೆ. ದೀಕ್ಷೆಯನ್ನು ಹೊಸದಾಗಿ ಪಡೆದವರಲ್ಲಿ ತಮ್ಮ ಮೂಲಜಾತಿಯ ಕೀಳರಿಮೆ ಇರಬಹುದು. ಸ್ವತಃ ಧರ್ಮಗುರು ಬಸವಣ್ಣನವರು ತಾವಾಗಿಯೇ ಬರುತ್ತೇವೆ ಎಂದರೂ ಅವರನ್ನು ಆಹ್ವಾನಿಸಲು ನವ ದೀಕ್ಷಿತರಿಗೆ ಭಯ, ಸಂಕೋಚ. ಕಂಬಳಿ ನಾಗಿದೇವನ ಪ್ರಸಂಗದಲ್ಲಿ ಧರ್ಮಪಿತರು ತಾವಾಗಿಯೇ ಅನಿರೀಕ್ಷಿತವಾಗಿ ಮನೆಗೆ ಹೋಗಿ ಪ್ರಸಾದವನ್ನು ಕೇಳಿ ಪಡೆದು ಉಣ್ಣುತ್ತಾರೆ. ಆಗ ಸಂಪ್ರದಾಯವಾದಿಗಳು ಬಿಜ್ಜಳನ ಬಳಿಗೆ ದೂರನ್ನು ಒಯ್ಯುವುದನ್ನು ಕಾಣುತ್ತೇವೆ. ಡೋಹರ ಕಕ್ಕಯ್ಯನವರ ಮನೆಯ ಪ್ರಸಾದಕ್ಕಾಗಿ ಎಷ್ಟೋ ದಿವಸಗಳ ಕಾಲ ಕಾಯ್ದರು ಎಂಬುದಾಗಿ ಓದುತ್ತೇವೆ. ನವ ದೀಕ್ಷಿತರಲ್ಲಿರುವ ಕೀಳರಿಮೆ ತೊಡೆಯಲು ಪ್ರಸಾದ ಸ್ವೀಕಾರ ಒಂದು ಸಾಧನ!

466. ನಂಬುವುದೇ ಆಚಾರ

ತೊತ್ತಿಂಗೇಕೆ ಲಕ್ಷಣ? ಬಂಟಂಗೇಕೆ ಆಚಾರ?
ಅವರೊಕ್ಕುದನುಂಡು ಮಿಕ್ಕುದ ಕಾಯ್ದುಕೊಂಡಿಪ್ಪುದು.
ಸಾರೆ ಹೊರಸೇಕೆ? ಅವಳಿಗೆ ಮಾರುತ್ತವೇಕೆ?
ಲಿಂಗದೇವನ ಶರಣರೊಡನೆ
ಇದಿರುತ್ತರವೇಕೆ ಸಿಂಬಕಂಗೆ? - ಬ.ವ.ದೀ.464

ತೊತ್ತು ಎಂದರೆ ಸೇವಕ, ಸೇವಕಿಯರು. ಇವರಲ್ಲಿ ಇರಬೇಕಾದುದು ಸೇವಾ ನಿಷ್ಠೆ; ಅವರು ಶಾರೀರಿಕ ಸೌಂದರ್ಯ ಹೊಂದಿದ್ದಾರೆಯೆ ಇಲ್ಲವೆ? ಎಂಬುದು ನಗಣ್ಯ. ಅವರ ಮುಖ ಲಕ್ಷಣಕ್ಕಿಂತ ಕಾಯಕ ನಿಷ್ಠೆ ಬಹಳ ಮುಖ್ಯ. ಬಂಟಂಗೆ ಆಚಾರವನ್ನು ಪಾಲಿಸುವುದು ಕಷ್ಟಕರ. ಬಂಟ ಎಂದರೆ ಸೈನಿಕ, ಸೇವಕ. ಸೈನಿಕನು ದೇಶದ ಸೇವೆಯಲ್ಲಿದ್ದರೆ, ಬಂಟನು ಒಡೆಯನ ಸೇವೆಯಲ್ಲಿರುತ್ತಾನೆ. ಅವನು ದೀಕ್ಷೆಯನ್ನು ಪಡೆದರೂ ಯುದ್ಧ ಭೂಮಿಯಲ್ಲಿರುವಾಗ ಗುರುವು ವಿಧಿಸಿದ ಆಚಾರವನ್ನು ಪಾಲಿಸಲು ಸಾಧ್ಯವಾಗುವುದಿಲ್ಲ. ಆದರೆ ಅದಕ್ಕಾಗಿ ಅವನು ವಿಷಾದ ಪಡಬೇಕಾಗಿಲ್ಲ. ಡಿಂಗರಿಗನೆಂದರೆ ಸೇವಕನಿಗೆ, ಆಗಮದ ಜ್ಞಾನ ಅಂದರೆ ಶಾಸ್ತ್ರಜ್ಞಾನ ಅಗತ್ಯವಿಲ್ಲ. ಅವನ ಕಾಯಕದಲ್ಲಿ ಅವನಿಗೆ ಪರಿಣತಿ ಇದ್ದರೆ ಸಾಕು.

ಇದಕ್ಕೊಂದು ಮಾರ್ಮಿಕ ದೃಷ್ಟಾಂತವಿದೆ. ಒಮ್ಮೆ ಒಬ್ಬ ಪಂಡಿತನು ದೋಣಿಯಲ್ಲಿ ಕುಳಿತು ನದಿ ದಾಟುತ್ತಿದ್ದ. ಅಂಬಿಗನು ಹುಟ್ಟು ಹಾಕುತ್ತ ದೋಣಿಯನ್ನು ಮುಂದಕ್ಕೆ ಒಯ್ಯುತ್ತಿದ್ದ. ಆಗ ಪಂಡಿತ ಕೇಳಿದ, "ಏನಯ್ಯಾ,ನಿನಗೆ ಸಂಸ್ಕೃತ ಬರುತ್ತದೆಯೆ?" "ಇಲ್ಲ ಸ್ವಾಮಿ," "ನಿನ್ನ ಜೀವನ ಕಾಲು ಭಾಗ ವ್ಯರ್ಥ ನೋಡು. ಹೋಗಲಿ ನಿನಗೆ ಶಾಸ್ತ್ರೋಕ್ತ ಪೂಜೆ ಬರುವುದೆ?" "ಇಲ್ಲ ಸ್ವಾಮಿ." "ನಿನ್ನ ಜೀವನ ಅರ್ಧದಷ್ಟು ವ್ಯರ್ಥ" ಎಂದು ಪಂಡಿತ ವಿಷಾದ ವ್ಯಕ್ತಪಡಿಸಿದ. ದೋಣಿ ನಡು ನೀರಿಗೆ ಬಂದಿತ್ತು. ಪ್ರವಾಹದ ಸೆಳವು ಹೆಚ್ಚಾಗಿ ದೋಣಿಯು ಹೊಯ್ದಾಡತೊಡಗಿತು. ಆಗ ಅಂಬಿಗ ಕೇಳಿದ, "ಸ್ವಾಮಿ, ನಿಮಗೆ ಈಜು ಬರುವುದೆ?" "ಇಲ್ಲ ಕಣಯ್ಯ." "ಹಾಗಾದರೆ ಈಗ ದೋಣಿ ಮುಳುಗಲಿದೆ. ನಿಮ್ಮ ಜೀವನ ಪೂರ್ತಿ ವ್ಯರ್ಥವಾಗುವುದು." ಎಂದು ಧುಮುಕಿ ಅಂಬಿಗ ಈಜಿ ದಡ ಸೇರಿದ. ಪಂಡಿತನು ಸೆಳವಿಗೆ ಸಿಕ್ಕಿ ಮುಳುಗಿಹೋದ. ಸೌಂದರ್ಯ, ಆಚಾರ, ಶಾಸ್ತ್ರಜ್ಞಾನ ಇಲ್ಲದಿದ್ದರೇನು ವ್ಯಕ್ತಿಗೆ ಅವರವರು ಮಾಡುವ ಕಾಯಕದಲ್ಲಿ ಶ್ರದ್ಧೆ ಮತ್ತು ನಿಷ್ಠೆ ಇದ್ದರೆ ಸಾಕು. ಒಂದು ಕಡೆ ವಚನಕಾರ್ತಿ ಕಾಳವ್ವೆ ಹೇಳುತ್ತಾಳೆ, "ವ್ರತ ತಪ್ಪಲು ಸೈರಿಸಬಹುದು, ಕಾಯಕ ತಪ್ಪಲು ಸೈರಿಸಲಾಗದು." ವ್ರತವು ವ್ಯಕ್ತಿಯ ವೈಯಕ್ತಿಕ ಸಾಧನೆಗೆ ಸಂಬಂಧಿಸಿದ್ದರೆ ಕಾಯಕವು ಸಮಷ್ಟಿ ಜೀವನಕ್ಕೆ ಸಂಬಂಧಪಟ್ಟುದಾಗಿದೆ.

ಕಡೆಯದಾಗಿ ಗುರು ಬಸವಣ್ಣನವರು ಅದ್ಭುತವಾದ ಒಂದು ಮಾತನ್ನು ಹೇಳುತ್ತಾರೆ: "ಲಿಂಗದೇವಾ, ನಿಮ್ಮ ನಂಬುವುದೇ ಆಚಾರ." ನಿಷ್ಠಾಪೂರ್ಣ ನಂಬಿಕೆ ಇಲ್ಲದೆ ಮಾಡುವ ಆಚಾರ ಒಂದು ಯಾಂತ್ರಿಕ ಕ್ರಿಯೆ. ದೃಢವಾದ ನಂಬಿಕೆ ಇದ್ದರೆ ಅದೇ ನಿಜವಾದ ಆಚಾರ!

ಬಹಳ ಸಮಯದಿಂದ ಒಂದು ಸಂದೇಹ ನನ್ನನ್ನು ಕಾಡುತ್ತಲಿದೆ. ಒಬ್ಬ ಲಿಂಗಾಯತನು ನಿಷ್ಠಾವಂತ ಅನುಯಾಯಿಯಾಗಿರಲು ಬಯಸುತ್ತಾನೆ ಎಂದುಕೊಳ್ಳುವಾ. ಅವನು ಗುರುವಿನಿಂದ ಇಷ್ಟಲಿಂಗವನ್ನು ಪಡೆದುಕೊಂಡು ಧರಿಸಿಕೊಳ್ಳುತ್ತಾನೆ. ಉದಾ: ಚಲನ ಚಿತ್ರ -ರಂಗಭೂಮಿ ನಟರು ಪಾತ್ರಕ್ಕೆ ತಕ್ಕ ವೇಷ ಹಾಕುವಾಗ ಅಂಗದ ಮೇಲೆ ಇಷ್ಟಲಿಂಗ ಇಟ್ಟುಕೊಳ್ಳಲಾರರು. ಹಾಗಾದರೆ ಅವನ ಧರ್ಮನಿಷ್ಠೆ ಹೇಗೆ ಉಳಿಸಿಕೊಳ್ಳಬೇಕು? ಇಂಥ ಪ್ರಶ್ನೆಗೆ ಈ ವಚನದಲ್ಲಿ ಉತ್ತರ ಸಿಗುವುದೆ? ಅಂಥ ಸಂದಿಗ್ಧ ಮತ್ತು ಕ್ಲಿಷ್ಟ ಸನ್ನಿವೇಶದಲ್ಲಿ ತನ್ನ ಧರ್ಮ ತತ್ವದಲ್ಲಿ, ಇಷ್ಟಲಿಂಗದಲ್ಲಿ ಮತ್ತು ಸೃಷ್ಟಿಕರ್ತ

ಲಿಂಗದೇವನಲ್ಲಿ ಅಚಲವಾದ ನಂಬಿಕೆ ಇದ್ದರೆ ಸಾಕು ಎಂದು ಸೂಚ್ಯವಾಗಿ ಧರ್ಮಪಿತರು ಹೇಳಿದ್ದಾರೆ ಎಂದುಕೊಳ್ಳಬಹುದೆ? (ಈ ವಚನ ವಾಕ್ಯಕ್ಕೆ ಬೇರೆ ಅರ್ಥ ಮಾಡುವವರು ಮತ್ತು ನನ್ನ ಊಹೆಗೆ ಆಕ್ಷೇಪ ವ್ಯಕ್ತಪಡಿಸುವವರು ಪತ್ರ ಬರೆಯಬಹುದು.)

ಇದಕ್ಕೆ ಆಪದ್ಧರ್ಮ ಎನ್ನಬಹುದು. ಆದರೆ ಉಳಿದೆಲ್ಲ ಸನ್ನಿವೇಶಗಳಲ್ಲಿ ಇಷ್ಟಲಿಂಗಧಾರಣೆ ಬಿಡಬಾರದು. ಶಾಸ್ತ್ರೋಕ್ತವಾಗಿ ಎಲ್ಲ ಪರಿಕರ ಸಮರ್ಪಿಸಿ ಇಷ್ಟಲಿಂಗ ಪೂಜೆ ಮಾಡಲಾಗದಿದ್ದರೂ ಎಲ್ಲಿದ್ದಲ್ಲಿ ಇಷ್ಟಲಿಂಗಕ್ಕೆ ಮಜ್ಜನಕ್ಕೆರೆದು ವಿಭೂತಿ ಧರಿಸಿ, ಕರುಣೋದಕವನ್ನೆರೆದು ಕರುಣೋದಕ ಕರುಣ ಪ್ರಸಾದ ಸ್ವೀಕರಿಸಬೇಕು. ಅನ್ಯರ ಎದುರು ಪೂಜೆ ಮಾಡಲು ಸಂಕೋಚ ಪಡಬಾರದು. ಅವರಿಗೆ ಇಷ್ಟಲಿಂಗದ ಮಹತ್ವ ಕುರಿತು ವಿವರಿಸಬೇಕು. ಒಂದು ವೇಳೆ ಪೂಜೆ ಮಾಡಲಾಗದ ಪರಿಸ್ಥಿತಿ ಇದ್ದರೂ ಇಷ್ಟಲಿಂಗವನ್ನು ಅಂಗದ ಮೇಲೆ ಧರಿಸಿರಬೇಕು. ಅದು ದೊಡ್ಡ ಶ್ರೀರಕ್ಷೆ. ವಿದೇಶ ಪ್ರವಾಸ ಕಾಲದಲ್ಲಿ ವಿಮಾನ ನಿಲ್ದಾಣಗಳಲ್ಲಿ ಇಷ್ಟಲಿಂಗವನ್ನು ನೋಡಿ ತನಿಖಾಧಿಕಾರಿಗಳು ಪ್ರಶ್ನಿಸಬಹುದು. ಆಗ ತಮ್ಮ ಧರ್ಮಲಾಂಛನ ಎಂದು ಅವರಿಗೆ ವಿವರಿಸಬೇಕು. ಆಪರೇಷನ್ ಮುಂತಾದ ಸಂದರ್ಭದಲ್ಲಿ ವೈದ್ಯರು ತೆಗೆಯಲು ಹೇಳಿದರೆ ಅದು ತಮಗೆ ಶ್ರೀರಕ್ಷೆ, ತೆಗೆಯುವುದಿಲ್ಲ ಎಂದು ಸ್ಪಷ್ಟಪಡಿಸಬೇಕು.

467, ಒಡೆಯರಿಗೆ ಇದಿರುತ್ತರ ಬೇಡ

ತೊತ್ತಿಂಗೆ ಲಕ್ಷಣವೇಕಯ್ಯಾ?
ಅವರೊಕ್ಕುದನುಂಡು ಮಿಕ್ಕುದ ಕಾಯ್ದುಕೊಂಡಿಪ್ಪುದು.
ಸಾರೆ ಹೊರಸೇಕೆ? ಅವಳಿಗೆ ಮಾರುತ್ತರವೇಕೆ?
ಲಿಂಗದೇವನ ಶರಣರೊಡನೆ
ಇದಿರುತ್ತರವೇಕೆ ಸಿಂಬಕಂಗೆ? - ಬ.ವ.ದೀ.465

ಹಿಂದಿನ ವಚನದ ಭಾವವೇ ಇಲ್ಲೂ ವ್ಯಕ್ತವಾಗಿದೆ. ಸೇವೆ ಮಾಡುವವಳಿಗೆ/ ಮಾಡುವವನಿಗೆ ಬಹಿರಂಗದ ರೂಪ, ಲಕ್ಷಣಗಳು ಮುಖ್ಯವಲ್ಲ. ಒಡೆಯರು ಕೊಡುವ ಊಟವನ್ನು ಉಂಡು ಅವರ ಮನೆಯನ್ನು, ವಸ್ತುಗಳನ್ನು ಸುರಕ್ಷಿತವಾಗಿರುವಂತೆ ಕಾಯ್ದುಕೊಂಡಿರುವುದು ತೊತ್ತಿನ ಕೆಲಸ. ಒಡೆಯರ ಮುಂದೆ ಸೇವಕಿಯು ಹೊರಸಿನ ಮೇಲೆ (ಕಟ್ಟಿಗೆಯ ಚೌಕಟ್ಟನಲ್ಲಿ ಹಗ್ಗದ ಹುರಿಗಳನ್ನು ಹೆಣೆದಿರುವ ಮಂಚ) ಕುಳಿತುಕೊಳ್ಳಬಾರದು; ಒಡೆಯರಿಗೆ ಎದುರು ವಾದಿಸುವುದೂ ಸರಿಯಲ್ಲ. ಅದೇ ರೀತಿ ನಿಜ ಜ್ಞಾನಿಗಳಾದ ಶರಣರೊಡನೆ ಎದುರುವಾದಿಸಬಾರದು. ಚರ್ಚೆ ಬೇರೆ, ಎದುರು ವಾದಿಸುವುದು ಬೇರೆ. ಅನುಭವ ಮಂಟಪದಲ್ಲಿ ಪರಸ್ಪರ ಪರ-ವಿರೋಧವಾಗಿ ಚರ್ಚಿಸುತ್ತಿದ್ದರೇ ವಿನಾ ಉದ್ಧಟತನದಿಂದ ವಾದಿಸುತ್ತಿರಲಿಲ್ಲ.

468. ಮಾತಿನ ಮಾಲೆಗೆ ದೇವನೊಲಿಯ

ಪಾದೋದಕವ ಕೊಂಬೆ, ಪ್ರಸಾದವ ಕೊಂಬೆ
ಅರ್ಥಪ್ರಾಣಾಭಿಮಾನ ನಿಮ್ಮದೆಂಬೆ!
ರಾತ್ರಿಯಲೊತ್ತೆಯ ಕೊಂಬ ಪಾತಕ ಸೂಳೆಯಂತೆ
ಬರಿಯ ಮಾತಿಂಗೊಲಿವನೆ ನಮ್ಮ ಲಿಂಗದೇವಾ - ಬ.ವ.ದೀ-466

ಒಬ್ಬ ವ್ಯಕ್ತಿ ಬಹಳ ಶ್ರೀಮಂತ ಧರ್ಮವಂತ. ದಿನ ನಿತ್ಯವೂ ಗುರು ಲಿಂಗ ಜಂಗಮ ಸೇವೆ ಮಾಡುತ್ತೇನೆ ಎನ್ನುತ್ತಾನೆ. ತಪ್ಪದೆ ಪದೋದಕ -ಪ್ರಸಾದಗಳನ್ನು ಪಡೆಯುತ್ತಾನೆ. ಮಾತನಾಡುವಾಗ ಸ್ವಾಮಿ ನನ್ನ ಅರ್ಥ ಎಂದರೆ ಸಂಪತ್ತು, ಪ್ರಾಣ ತಮಗೇ ಮೀಸಲು ನನ್ನ ಅಭಿಮಾನ ನಿಮ್ಮದೇ ಆಸ್ತಿ. ಎಲ್ಲವೂ ತಮ್ಮ ಕೃಪೆಯಿಂದಲೇ ಎನ್ನುತ್ತಾನೆ. ಆದರೆ ವಾಸ್ತವಿಕವಾಗಿ ಒಂದು ಪೈಸೆಯಷ್ಟನ್ನೂ ಕೊಡನು

ಇವನ ಭಕ್ತಿ, ಶರಣಾಗತಿ ಹೇಗೆಂದರೆ ರಾತ್ರಿಯ ವೇಳೆ ವಿಟನಿಂದ ಹಣವನ್ನು ಪಡೆದು ತಾತ್ಕಾಲಿಕವಾಗಿ ಒತ್ತೆ ಹೋಗಿ ಆ ಸಮಯದಲ್ಲಿ 'ನಿಮ್ಮನ್ನು ನಾನು ಬಹಳ ಪ್ರೀತಿಸುತ್ತೇನೆ. ನಿಮ್ಮನ್ನು ನನ್ನ ಪ್ರಾಣವೆಂದೇ ತಿಳಿದಿದ್ದೇನೆ.' ಎಂದು ಹೇಳುವಂತೆ, ಅವಳ ಪ್ರೀತಿ ತಾತ್ಕಾಲಿಕ, ಬೇರೊಬ್ಬ ಪುರುಷನಿಗೆ ಒತ್ತೆ ಹೋದಾಗಲೂ ಅವಳು ಇದೇ ಮಾತನ್ನು ಹೇಳುವಳು. ಇಂಥ ಕೃತ್ರಿಮ ನಟನೆಯ ಭಕ್ತರ ಟೊಳ್ಳು ಮಾತಿಗೆ ಲಿಂಗದೇವನು ಒಲಿಯುವುದುಂಟೆ?

469. ಪ್ರಸಾದದ ಮಹತಿ

ಪಾತಕ ಮಹಾಪಾತಕವ ಮಾಡಿದವನು
ಸದ್ಭಕ್ತರ ಮನೆಗೆ ಹೋಗಿ
ಅವರೊಕ್ಕ ಪ್ರಸಾದವನಾಯ್ದುಕೊಂಡುಂಡಡೆ
ಸಕಲ ಬ್ರಹ್ಮಹತ್ಯಾದಿ ಪಾತಕ ಪರಿಹಾರ,
ಒಮ್ಮೆ ಬೇಡಿಕೊಂಡುಂಡಡೆ.
ಇದು ಕಾರಣ ಲಿಂಗದೇವಾ,
ನಿಮ್ಮ ಸದ್ಭಕ್ತರಿಗೆ ನಮೋ ನಮೋ ಎಂಬೆನು. - ಬ.ವ.ದೀ.467

"ಪಾಪ ಕಾರ್ಯಗಳನ್ನು ಮಾಡಿದವನು, ಘೋರ ಅಪರಾಧವನ್ನು ಮಾಡಿದವನು ಸದ್ಭಕ್ತರ ಮನೆಗೆ ಹೋಗಿ ಅವರು ಉಂಡು, ಕರುಣಿಸಿದ ಪ್ರಸಾದವನ್ನು ಸ್ವೀಕರಿಸಿದರೆ ಅವರ ಪಾಪಗಳು ಪರಿಹಾರವಾಗುತ್ತವೆ. (ಪಶ್ಚಾತ್ತಾಪದಲ್ಲಿ ಬೆಂದು) ಬೇಡಿಕೊಂಡು ಸದ್ಭಕ್ತರ ಪ್ರಸಾದ ತೆಗೆದುಕೊಂಡರೆ ಘೋರ ಪಾಪಗಳು ಪರಿಹಾರವಾಗುತ್ತವೆ. ಅಂತಹ ಅನುಗ್ರಹ ಶಕ್ತಿ ಇರುವ ಸದ್ಭಕ್ತರಿಗೆ ನಾನು ವಂದಿಸುತ್ತೇನೆ." ಎನ್ನುವರು ಗುರು ಬಸವಣ್ಣನವರು.

ಕೇವಲ ಸದ್ಭಕ್ತರ ಮನೆಯ ಪ್ರಸಾದವನ್ನು ಉಂಡ ಮಾತ್ರಕ್ಕೆ ಪಾಪ ಪರಿಹಾರವು ಸಾಧ್ಯವೆ? ಈ ಕ್ರಿಯೆಯ ಹಿಂದೆ ಅನೇಕ ಸಂಗತಿಗಳಿವೆ. ಪಾತಕಗಳನ್ನು ಮಾಡಿದವನಿಗೆ ಮೊದಲು ತಾನು ಪಾಪವನ್ನು ಮಾಡಿದ್ದೇನೆ ಎಂಬ ಅರಿವು ಮೂಡಬೇಕು. ಮಾಡಿದ ಪಾಪಕ್ಕಾಗಿ ತೀವ್ರವಾದ ಪಶ್ಚಾತ್ತಾಪ ಉಂಟಾಗಿ ಪ್ರಸಾದಕ್ಕೆ ಪಾಪವನ್ನು ಪರಿಹರಿಸುವ ಶಕ್ತಿ ಇದೆ ಎಂಬ ತಿಳುವಳಿಕೆ ಮೂಡಬೇಕು. ಆಗ ಪ್ರಸಾದವು ಲಭ್ಯವಾಗಬೇಕು. ಪ್ರಸಾದ ಕೊಡುವವನಿಗೆ ಅನುಗ್ರಹಿಸುವ ಸಾಮರ್ಥ್ಯ, ಹಂಬಲವಿರಬೇಕು. ಪಾಪ ಎಸಗಿದವನು ತನ್ನ ತಪ್ಪುಗಳನ್ನು ಶರಣನಿಗೆ ತಿಳಿಸಿ, ಅನುಗ್ರಹಿಸಲು ಬೇಡಬೇಕು. ಆಗ ಪಾತಕಿಯ ಭಕ್ತಿ ಅನುಗ್ರಹಿಸುವವನ ಶಕ್ತಿ ಎರಡೂ ಕೂಡಿ ಪಾತಕವು ಪರಿಹಾರವಾಗುವುದು. ಅಂಥ ದೈವೀಶಕ್ತಿ ಹೊಂದಿರುವ ಸದ್ಭಕ್ತನಿಗೆ ಗುರು ಬಸವಣ್ಣನವರು ನಮೋ ನಮೋ ಎಂದು ಗೌರವಿಸುತ್ತಾರೆ.

470. ಶರಣರ ಪ್ರಸಾದದ ಹಿರಿಮೆ

ನಾನು ಹೊತ್ತ ಹುಳ್ಳಿಯನಂಬಲಿಗೆ ಕೊಂಬುವರಿಲ್ಲ, ನೋಡಯ್ಯಾ.
ಆನು ನಿಮ್ಮ ಶರಣರ ಒಕ್ಕುದನುಂಡು ಬದುಕಿದೆನಯ್ಯಾ,
ಮೇರುವ ಸಾರಿದ ಕಾಗೆ ಹೊಂಬಣ್ಣವಪ್ಪುದು ತಪ್ಪದು, ಲಿಂಗದೇವಾ.
- ಬ.ವ.ದೀ. 468

ಹುಳ್ಳಿ ಎಂದರೆ ಕಟ್ಟಿಗೆಯ ಹೊರೆ. ಅದನ್ನು ತೆಗೆದುಕೊಂಡು ಹಸಿವೆಯನ್ನು ನೀಗಿಸಲು ಯಾರಾದರೂ ಅಂಬಲಿ ಕೊಡಿರಿ ಎಂದು ಬೇಡಿದರೆ, ಕಟ್ಟಿಗೆ ಹೊರೆಯನ್ನು ಕೊಳ್ಳುವವರಿಲ್ಲ. ಅಷ್ಟು ಅಲ್ಪವಾಗಿದೆ ನನ್ನ ಜ್ಞಾನ, ಭಕ್ತಿ ಆಚಾರ. ಆದರೆ ಶರಣರು ಉದಾರಿಗಳು, ವಿಶಾಲ ಮನಸ್ಕರು, ಅವರು ನನ್ನ ಬಳಿ ಕೊಡಲು ಏನೂ ಇಲ್ಲವಾದರೂ ನನಗೆ ಭಕ್ತಿ ಜ್ಞಾನಗಳ ಭಿಕ್ಷೆಯನ್ನು ಪ್ರಸಾದವಾಗಿ

ಕೊಡುತ್ತಾರೆ. ಇದರಿಂದ ನನಗೆ ಪುನಶ್ಚೇತನ ಬರುತ್ತದೆ. ಕಾಗೆಯು ಮೇರು ಪರ್ವತದ ಮೇಲೆ ಹಾರಿದರೆ ಅದಕ್ಕೆ ಹೊಂಬಣ್ಣವು ಬರುತ್ತದೆ. ಹಾಗೆ ಶರಣರ ಸಂಗದಿಂದ ಯಾವ ಪ್ರಯತ್ನವನ್ನು ಮಾಡದೆಯೂ ನಾನು ಸಜ್ಜನ, ಸದ್ಭಕ್ತನಾಗಬಲ್ಲೆ. ಈ ವಚನದ ಅಂತರಾರ್ಥವೇನೆಂದರೆ ವ್ಯಕ್ತಿಯಲ್ಲಿ ಜ್ಞಾನವಾಗಲಿ, ಭಕ್ತಿಯಾಗಲಿ ಇದೆಯೋ ಇಲ್ಲವೋ ಕಾಗೆ ಮೇರುಪರ್ವತದ ಮೇಲೆ ಯಾಂತ್ರಿಕವಾಗಿ ಹಾರುವಂತೆ, ವ್ಯಕ್ತಿಯು ಸತತವಾಗಿ ಶರಣರ ಒಡನಾಟ ಹೊಂದುತ್ತಿದ್ದರೆ ಅವನಲ್ಲಿ ಖಂಡಿತ ಊರ್ಧ್ವ ಗತಿಯ ಬದಲಾವಣೆಯಾಗುತ್ತದೆ.

471. ಶರಣರ ಋಣ ಅಗಾಧ

ಭವ ಭವದಲ್ಲಿ ನಿಮ್ಮ ಜಂಗಮವೆ ಶರಣಯ್ಯಾ,
ಅವರುಂಡು ಮಿಕ್ಕಿದ ಉಡುಗಿ,
ಒಕ್ಕ ಪ್ರಸಾದವನಾಯ್ದುಕೊಂಬ ಮರುಳ ನಾನಯ್ಯ
ನಮ್ಮ ಲಿಂಗದೇವನ ಶರಣರ ರಿಣವನಾ ಹಿಂಗಲಾರೆ. - ಬ.ವ.ದೀ. 469

ಲಿಂಗದೇವಾ, ಭವ ಎಂದರೆ ಅನಂತ ಜನ್ಮಗಳ ಸರಮಾಲೆ; ಅಂಥ ಭವದಲ್ಲಿ ನನ್ನನ್ನ ಕಳಿಸು. ಆದರೆ ನಿನ್ನ ಪ್ರತಿನಿಧಿಗಳು, ಸಾಕಾರ ಸ್ವರೂಪರೂ ಆದ ಜಂಗಮಕ್ಕೆ ಶರಣಾಗಿರುವ ಮನೋಭಾವ ಒದಗಿಸು. ಅವರು ಊಟ ಮಾಡಿದ ನಂತರ ಅವರ ತಟ್ಟೆಗಳನ್ನು ತೆಗೆದು, ನೆಲವನ್ನು ಗುಡಿಸಿ, ಒರೆಸಿ ನಂತರ ಲಭ್ಯವಾಗುವ ಪ್ರಸಾದವನ್ನು ಸ್ವೀಕಾರ ಮಾಡಬೇಕೆಂಬ ಭಾವುಕ ನಾನು. ಏಕೆಂದರೆ ನಿನ್ನ ಶರಣರು ನೀಡುವ ಜ್ಞಾನ, ಮಾರ್ಗದರ್ಶನದ ಋಣವನ್ನು ನಾನು ಎಂದಿಗೂ ತೀರಿಸಲಾರೆ.

ಇದು ಭಕ್ತರಿಗೆ ದಾಸೋಹ ಪ್ರಜ್ಞೆಯನ್ನು ಬೆಳೆಸುವ ಅಮೂಲ್ಯ ವಚನ. ಅನೇಕ ಜನರಲ್ಲಿ ಮಾಡುವ ಕೆಲಸದಲ್ಲಿ ತಾರತಮ್ಯವಿರುತ್ತದೆ. ಮೈ ಬಗ್ಗಿಸಿ ಕೆಲಸ (ಸೇವೆ) ಮಾಡುವುದು ತಮ್ಮ ಸಿರಿವಂತಿಕೆಗೆ, ಅಂತಸ್ತಿಗೆ ಕುಂದು ಎಂಬ ಮನೋಭಾವವಿರುತ್ತದೆ. ಇದನ್ನು ತೊಡೆದು ಹಾಕುವುದು ಧರ್ಮಪಿತರ ಗುರಿ.

ಬೆಂಗಳೂರು ಬಸವ ಮಂಟಪಕ್ಕೆ ಬರುವ ರಾಷ್ಟ್ರೀಯ ಬಸವ ದಳದ ಕೆಲವು ಶರಣರ, ತರುಣರ ಸೇವೆ ಅನನ್ಯ. ಅವರು ಶರಣ ಮೇಳದಲ್ಲೂ ಅಷ್ಟೇ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಾರೆ. ನೀಲಮ್ಮ ಎಂಬ ಒಬ್ಬ ಶರಣೆ ಬರುತ್ತಾರೆ. ಅವರ ಮಕ್ಕಳು ಉನ್ನತ ಹುದ್ದೆಯಲ್ಲಿದ್ದಾರೆ. ಸೊಸೆಯರು ಮನೆಯಲ್ಲಿ ಏನೂ ಕೆಲಸ ಮಾಡಗೊಡುವುದಿಲ್ಲವಂತೆ. ಆದರೆ ಬಸವ ಮಂಟಪಕ್ಕೆ ಬಂದು ಸೇವೆ ಮಾಡುವುದಲ್ಲದೆ ದೇವ(ಭಾನು)ವಾರದಂದು ನಡೆಯುವ ದಾಸೋಹದಲ್ಲಿ ಶರಣರಿಗೆ ಪ್ರಸಾದ ಬಡಿಸಿ, ನಂತರ ತಟ್ಟೆ ತೆಗೆದು, ಗುಡಿಸಿ, ಸಾರಿಸಿ ತಾವು ಪ್ರಸಾದ ಸ್ವೀಕರಿಸುತ್ತಾರೆ. ಮತ್ತೊಬ್ಬ ಶರಣೆ ಗಂಗಲಕ್ಷ್ಮಮ್ಮ ಎನ್ನುವವರು ಬೆಳಗಿನ ಜಾವ ಬಂದು ಅಂಗಳದಲ್ಲಿ ಕಸ ಗುಡಿಸಿ, ತೊಳೆದು ರಂಗೋಲಿಯನ್ನು ಬಿಟ್ಟು ಹೋಗುತ್ತಾರೆ. ಈ ಸೇವೆಯನ್ನು 1975ರಿಂದಲೂ ತಪ್ಪದೆ ಮಾಡುತ್ತಿದ್ದಾರೆ.

ನಮ್ಮ ಸಮಾಜದಲ್ಲಿ ಮಠಗಳಲ್ಲಿ ಶ್ರಾವಣ ಮಾಸದಲ್ಲಿ ನಿರಂತರವಾಗಿ ಪೂಜೆ-ದಾಸೋಹ ನಡೆಯುತ್ತಿದ್ದವು. ಆಗ ಕೆಲವು ಶ್ರೀಮಂತರು ಹರಾಜಿನಲ್ಲಿ ಕೂಗಿ ಉಂಡ ನಂತರದ ಎಲೆ (ತಟ್ಟೆ) ತೆಗೆಯುವ ಸೇವೆಯನ್ನು ಪಡೆದು, ಅದನ್ನು ಪೂರೈಸಿ ನಂತರ ತಾವು ಪ್ರಸಾದ ಮಾಡಿ ಮನೆಗೆ ಹೋಗುತ್ತಿದ್ದರು. ಇದು ಧರ್ಮಪಿತರ ವಚನಕ್ಕೆ ಕ್ರಿಯಾ ವ್ಯಾಖ್ಯಾನದಂತಿದೆ. ಸಿಖ್ಖರ ಗುರುದ್ವಾರದಲ್ಲಿ ದೊಡ್ಡ ದೊಡ್ಡ ಶ್ರೀಮಂತರು, ಕೋಟ್ಯಧೀಶರು ಆಮದಾದ ಕಾರುಗಳಲ್ಲಿ ಬಂದು, ಜೂತ್ ಸೇವಾ(ಚಪ್ಪಲಿ ಸೇವೆ) ಮಾಡುತ್ತಾರೆ. ಸಂದರ್ಶಕರು ಗುರುದ್ವಾರದ ಒಳಗೆ ಹೋಗಿ ಬರುವಷ್ಟರಲ್ಲಿ ಅವಕ್ಕೆ ಪಾಲಿಶ್ ಮಾಡಿಯೋ, ತೊಳೆದೋ ಇಟ್ಟಿರುತ್ತಾರೆ. ಅಡಿಗೆ ಮನೆಯಲ್ಲಿ ಸೇವೆ ಗೈಯುತ್ತಾರೆ. ಊಟ ಮಾಡಿದ ತಟ್ಟೆಗಳನ್ನು ತೊಳೆಯುತ್ತಾರೆ. ಅದನ್ನು ನೋಡಲು ಎರಡು ಕಣ್ಣು ಸಾಲವು.

472. ಸೇವೆಯೇ ಪರಮ ಭಾಗ್ಯ

ದಾಸಿಯ ವರ್ಗದಲ್ಲಿಪ್ಪೆನು ಶಿವಶರಣರ ಮನೆಯಲ್ಲಿ;
ಅವರೊಕ್ಕುದನುಂಡು, ಮಿಕ್ಕುದ ಕಾಯ್ದುಕೊಂಡಿಪ್ಪ ಕಾರಣ,
ಕಾಲ ಮುಟ್ಟಲಮ್ಮವು; ಕಲ್ಪಿತ ತೊಡೆಯಿತ್ತು;
ಎನ್ನ ಭವಬಂಧನ ಹಿಂಗಿತ್ತು, ಕರ್ಮ ನಿರ್ಮಳವಾಯಿತ್ತು!
ಅವರ ತೊತ್ತಿನ ಮರುದೊತ್ತಿನ ಮಗನೆಂದು
ಲಿಂಗದೇವ ಇತ್ತ ಬಾ ಎಂದೆತ್ತಿಕೊಂಡನು. - ಬ.ವ.ದೀ. 470

ಸಾಮಾನ್ಯವಾಗಿ ಬಹುಪಾಲು ಜನರು ವೇದಿಕೆಯ ಮೋಹಿಗಳು. ಹೆಚ್ಚಿನ ಅಧಿಕಾರ, ಸ್ಥಾನ ಮಾನ ಬೇಕೆಂದು ಚಟಪಟಿಸುವರು. ಹಿನ್ನೆಲೆಯಲ್ಲಿ ಇದ್ದುಕೊಂಡು ಸೇವೆ ಮಾಡಬೇಕೆಂದು ಬಯಸುವವರು ಕಡಿಮೆ. ಇದೇ ಹಿನ್ನೆಲೆಯಲ್ಲೇ ಧರ್ಮಪಿತರು ಇನ್ನೊಂದು ವಚನದಲ್ಲಿ ಕಾಗೆ ವಿಷ್ಟಿಸುವ ಹೊನ್ನ ಕಳಸವಹುದರಿಂದ ಒಡೆಯರು ಜೋಗೈಸುವ ಚಮ್ಮಾವುಗೆಯ ಮಾಡಯ್ಯ ಎಂದು ಲಿಂಗದೇವನಲ್ಲಿ ಬೇಡಿರುವುದು. ಆತ್ಮಸಾಕ್ಷಿಯಾಗಿ ಕೆಲಸ ಮಾಡುವವರು ಹಾಗಲ್ಲ ಒಬ್ಬರ ಗಮನಕ್ಕೂ ಬರದಂತೆ ತಮ್ಮ ಪಾಡಿಗೆ ತಾವು ದುಡಿಯುವರು.

ಈ ವಚನದಲ್ಲಿ ಹೇಳುತ್ತಾರೆ, ಶರಣರ ಮನೆಯಲ್ಲಿ ನಾನು ಹೆಚ್ಚಿನ ಅಂತಸ್ತು ಹೊಂದುವುದಕ್ಕಿಂತಲೂ ಸೇವಕರ ವರ್ಗದಲ್ಲಿ ಇರಬಯಸುವೆ. ಒಡೆಯರು ಉಂಡ ನಂತರ ಉಂಡು, ಅವರ ಸಂಪತ್ತನ್ನು ಕಾಯ್ದುಕೊಂಡು ಇರುವ ಕಾರಣ ನನ್ನನ್ನು ಸಾವು ಮುಟ್ಟಲಾರದು, ಮುಂದೆ ಬರಬಹುದಾದ ಆಗಾಮಿ ಕರ್ಮವು ಬಾಧಿಸದು, ಜನ್ಮ ಜನ್ಮಾಂತರದ ನೋವು ಹಿಂಗಿತು; ಈವರೆಗೂ ಅರಿತೋ ಅರಿಯದೆಯೋ ಮಾಡಿದ ಕರ್ಮ ನಿರ್ಮಲವಾಯಿತ್ತು. ಶರಣರ, ಸೇವಕರ, ಸೇವಕನ ಮಗ ನಾನಾದೆ ಎಂದು ಪರಮಾತ್ಮನು ನನ್ನನ್ನು ಪ್ರೀತಿಯಿಂದ ಎತ್ತಿಕೊಳ್ಳುವನು. ಹೀಗೆ ಶರಣರ ಒಲುಮೆಯು ಲಿಂಗದೇವನ ಒಲುಮೆಗೆ ಸಾಧನ.

473. ಸೋಹಂ - ದಾಸೋಹಂ ವ್ಯತ್ಯಾಸ

ಜನ್ಮ ಜನ್ಮಕ್ಕೆ ಹೋಗಲೀಯದೆ, ಸೋಹಂ ಎಂದೆನಿಸದೆ,
ದಾಸೋಹಂ ಎಂದೆನಿಸಯ್ಯಾ
ಲಿಂಗಜಂಗಮದ ಪ್ರಸಾದವ ತೋರಿ ಬದುಕಿಸಯ್ಯಾ, ಲಿಂಗದೇವಾ.
- ಬ.ವ.ದೀ. 471

ಸೋಹಂ - ಸ + ಅಹಂ = ಅದುವೇ ನಾನು, ಅದೆಂದರೆ ಆ ಪರತತ್ವ. ಅದೇ ನಾನು ಎಂಬುದು ಅದ್ವೈತ ಸಿದಾಂತ. ಅಹಂ ಬ್ರಹ್ಮಾಸ್ಮಿ, ನಾನು ಬ್ರಹ್ಮನೇ ಇದ್ದೇನೆ. ಬಸವ ಸಿದ್ಧಾಂತದ ಪ್ರಕಾರ ಸೃಷ್ಟಿಕರ್ತನಾದ ಪರಮಾತ್ಮನ ಒಂದು ಅಂಶ ಜೀವಾತ್ಮನೇ ಪರಮಾತ್ಮನಲ್ಲ. ಹಾಗೆ ಹೇಳುವುದು ಅಹಂಭಾವ. ಇದು ಭವಬಂಧನದ ಬಿಡುಗಡೆಗೆ ನೆರವಾಗದೆ ಜನ್ಮಜನ್ಮಾಂತರಕ್ಕೆ ಕಾರಣವಾಗುವುದು. ದಾಸೋಹಂ ತತ್ವದ ಪ್ರಕಾರ ಪರಮಾತ್ಮನೇ ಆತ್ಯಂತಿಕ ಸತ್ಯ. ಜೀವಾತ್ಮವು ಪರಮಾತ್ಮನ ಒಂದು ಕಿರಣ ಮಾತ್ರ. ಈ ದಾಸೋಹಂ ತತ್ವವನ್ನು ಒಪ್ಪಿಕೊಂಡರೆ ಆಗ ಅನುಗ್ರಹಕ್ಕೆ ಬಹಳ ಮಹತ್ವದ ಸ್ಥಾನ ಲಭ್ಯವಾಗುವುದು. ಆ ಅನುಗ್ರಹವು ಹರಿದು ಬರುವ ಸಾಧನವೆಂದರೆ ಲಿಂಗದ ಪ್ರಸಾದ ಮತ್ತು ಜಂಗಮದ ಪ್ರಸಾದ. ದಿನ ನಿತ್ಯ ಇಷ್ಟಲಿಂಗದ ಮೂಲಕ ಸೃಷ್ಟಿಕರ್ತ ಲಿಂಗದೇವನನ್ನು ಆರಾಧಿಸುವುದರಿಂದ ದೇವನ ಅನುಗ್ರಹವು ತೀರ್ಥ-ಪ್ರಸಾದದ ಮೂಲಕ ಲಭ್ಯವಾಗುವುದು. ಜಂಗಮನು ಕರುಣ ಪ್ರಸಾದವನ್ನು ನೀಡುವನು. ಇದರಿಂದ ಜೀವನವು ಉತ್ಥಾನಗೊಳ್ಳುವುದು, ಉದಾತ್ತೀಕರಣಗೊಳ್ಳುವುದು.

ಸೋಹಂ, ತತ್ವಂ ಅಸಿ, ಅಹಂ ಬ್ರಹ್ಮಾಸ್ಮಿ ಎಂಬ ತತ್ವಗಳೆಲ್ಲವೂ ಜೀವ-ಬ್ರಹ್ಮರ ಅಭಿನ್ನತೆ

ಹೇಳುವ ಕಾರಣ ನಿಜವಾಗಿಯೂ ಹೇಳಬೇಕೆಂದರೆ ಅಲ್ಲಿ ಭಕ್ತಿ, ಶರಣಾಗತಿ, ಪೂಜೆ ಮುಂತಾದುವಕ್ಕೆ ಅವಕಾಶವಿರದು. ತಮ್ಮ ಸಿದ್ಧಾಂತಕ್ಕೆ ವಿರುದ್ಧವಾಗಿಯೇ ಶ್ರೀ ಶಂಕರಾಚಾರ್ಯರು ಪೂಜೆ, ಭಜನೆ, ಮೂರ್ತಿ ಪ್ರತಿಷ್ಠಾಪನೆ ಮಾಡಿದರೆನ್ನಬಹುದು. ಗುರು ಬಸವಣ್ಣನವರ ತತ್ವ ಸೋಹಂ (Egocentrism) ಎಂದು ಹೇಳದೆ ದಾಸೋಹಂ (Theocentrism) ಎಂದು ಹೇಳುವುದರಿಂದ ದೇವನ ಪರಮೋನ್ನತ ಒಡೆತನವು ಉಳಿದು, ಅವನ ಅನುಗ್ರಹಕ್ಕೆ ಹೆಚ್ಚಿನ ಮಹತ್ವ ದೊರೆಯುವುದು.

474. ಪ್ರಸಾದದಲ್ಲಿಯೇ ಪರಮಸುಖ

ಕರ್ತರು ನಿಮ್ಮ ಗಣಂಗಳು ಎನ್ನ ತೊತ್ತು ಮಾಡಿ ಸಲಹಿದ ಸುಖವು
ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯದಂತುಟಲ್ಲ,
ಕೇಳಯ್ಯಾ, ಲಿಂಗದೇವನ ಶರಣರು
ತಮ್ಮ ಒಕ್ಕುದನಿಕ್ಕಿ ಸಲಹುವ ಸುಖವು. - ಬ.ವ.ದೀ. 472

ಗಣಂಗಳು ಅಂದರೆ ಸಮಾಜದ ಸದಸ್ಯರು, ಸಹ ಧರ್ಮೀಯರು. ಅವರೇ ನಿಜ ಒಡೆಯರು. ಅವರು ಪರಸ್ಪರ ಆದರಿಸುವರು, ಕಷ್ಟ ಸುಖದಲ್ಲಿ ಪಾಲುಗಾರರಾಗುವರು. ಅವರಿಂದ ಲಭ್ಯವಾಗುವ ಆದರವು ಚತುರ್ವಿಧ ಪದವಿಯನ್ನು ಮೀರಿದ ಸುಖ. ಸಾಲೋಕ್ಯವೆಂದರೆ ಕೈಲಾಸ, ವೈಕುಂಠದಂತಹ ಲೋಕಗಳಲ್ಲಿ ಪುಣ್ಯ ಕರ್ಮಗಳನ್ನು ಮಾಡಿ ಸತ್ತಾಗ ಸಿಕ್ಕುವ ಪದವಿ. ಸಾಮೀಪ್ಯವೆಂದರೆ ಕೈಲಾಸಾಧಿಪತಿ, ವೈಕುಂಠಾಧಿಪತಿ ಮುಂತಾದ ದೇವತೆಗಳ ಸಮೀಪದಲ್ಲಿ ಇರುವ ಭಾಗ್ಯ. ಇನ್ನೂ ಹೆಚ್ಚು ಪುಣ್ಯ ಮಾಡಿದವರು ಸಾರೂಪ್ಯವನ್ನು ಹೊಂದುತ್ತಾರೆ, ಇವರೆಲ್ಲರೂ ಶಿವ-ಪಾರ್ವತಿಯರಂತೆ, ವಿಷ್ಣು-ಲಕ್ಷ್ಮಿಯರಂತೆ ವೇಷ ಧರಿಸುವ ಭಾಗ್ಯ. ಇವರೆಲ್ಲರೂ ಪುಣ್ಯ ತೀರಿದ ಬಳಿಕ ಪುನಃ ಭೂಮಿಯಲ್ಲಿ ಹುಟ್ಟುವರಾದರೆ ಸಾಯುಜ್ಯ ಹೊಂದಿದವರು ಶಾಶ್ವತವಾಗಿ ಆ ಲೋಕಗಳಲ್ಲಿಯೇ ನೆಲೆಸುತ್ತಾರೆ. ಇದುವೇ ಮೋಕ್ಷ.

ಇಂಥ ಚತುರ್ವಿಧ ಪದವಿಯನ್ನೂ ಮೀರಿದ ಸುಖ ದೊರೆಯುವುದು ಶರಣರ ಸಂಗದಲ್ಲಿ ಮತ್ತು ಅವರು ಕೊಡುವ ಪ್ರಸಾದದಲ್ಲಿ. ಕೈಲಾಸ, ವೈಕುಂಠಗಳಲ್ಲಿ ಭಕ್ತಿ ಇರಬಹುದು, ಜ್ಞಾನ ಸಂಪತ್ತು ಇರುವುದಿಲ್ಲ. ಶರಣರ ಒಡನಾಟದಲ್ಲಿ ಜ್ಞಾನ ಸಂಪತ್ತು ಲಭ್ಯವಾಗುವುದು.

475. ಪಂಚೇಂದ್ರಿಯ ದೈವೀಕರಣ

ತೊತ್ತಿಂಗೆ ಬಲ್ಲಹನೊಲಿದಡೆ ಪದವಿಯ ಮಾಡದೆ ಮಾಣ್ಬನೆ?
ಜೇಡರ ದಾಸಯ್ಯಂಗೊಲಿದಾತ, ಮತ್ತೊಬ್ಬ ದೇವನೆ, ಅಯ್ಯಾ?
ಮಾದರ ಚನ್ನಯ್ಯಂಗೆ, ಡೋಹರ ಕಕ್ಕಯ್ಯಂಗೆ,
ತೆಲುಗ ಜೊಮ್ಮಯ್ಯಂಗೆ ಒಲಿದಾತ ಮತ್ತೊಬ್ಬ ದೇವನೆ ಅಯ್ಯಾ?
ಎನ್ನ ಮನದ ಪಂಚೇಂದ್ರಿಯ ನಿಮ್ಮತ್ತಲಾದಡೆ
ತನ್ನತ್ತ ಮಾಡುವ ಲಿಂಗದೇವ. - ಬ.ವ.ದೀ. 473

ಸೇವಕನಿಗೆ ಒಡೆಯನು ಒಲಿದರೆ ಉನ್ನತವಾದ ಸ್ಥಾನವನ್ನೇ ನೀಡುವನು. ಕೆಲವು ಜನ ಸೇವಕರು ಅತ್ಯಂತ ನಿಷ್ಠಾವಂತರಾಗಿ ಇರುತ್ತಾರೆ. ಅವರ ನಿಷ್ಠೆ, ಶ್ರದ್ಧೆ ಕಂಡು ಮಾಲಿಕರು ಸುಪ್ರೀತರಾಗಿ ತಮ್ಮ ಆಸ್ತಿಯನ್ನೇ ಕೊಡುವುದೂ ಉಂಟು; ಅಥವಾ ತಮ್ಮ ವ್ಯಾಪಾರ ವ್ಯವಹಾರದಲ್ಲಿ ಹೆಚ್ಚಿನ ಸಹಭಾಗಿತ್ವ ಕೊಡುವುದು ಉಂಟು. ಹಾಗೆಯೇ ದೇವರು ಸಹಿತ ಭಕ್ತರ ನಿಷ್ಠೆಗೆ ಅನುಸಾರವಾಗಿ ಒಲುಮೆಯನ್ನು ನೀಡುವನು. ಜೇಡರ ದಾಸಿಮಯ್ಯ, ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ತೆಲಗು ಜೊಮ್ಮಯ್ಯ ಮುಂತಾದ ಶರಣರಿಗೆ ಒಲಿದ ದೇವರು ಬೇರೆಯೆ? ಅದೇ ದೇವರು ಅವನು

ನನಗೇಕೆ ಒಲಿಯುತ್ತಿಲ್ಲ? ಅವರೆಲ್ಲ ತಮ್ಮ ಮನಸ್ಸನ್ನು, ಮನಸ್ಸು ಬಹಿರ್ಮುಖವಾಗಿ ಹರಿಯಲು ಸಾಧನವಾಗುವ ಪಂಚೇಂದ್ರಿಯಗಳನ್ನು ದೈವೀಕರಿಸಿಕೊಂಡಿದ್ದಾರೆ. ಅದಕ್ಕಾಗಿ ಲಿಂಗದೇವನು ಆ ಮಹಾನುಭಾವರನ್ನು ತನ್ನತ್ತ ಮಾಡಿಕೊಂಡಿದ್ದಾನೆ; ಒಲುಮೆ ಹರಿಸಿದ್ದಾನೆ.

ಇವರೆಲ್ಲ ಅನುಭವ ಮಂಟಪದ ಶರಣರು, ಗುರು ಬಸವಣ್ಣನವರ ಸಮಕಾಲೀನರು. ದೇವರ ದಾಸಿಮಯ್ಯ ಬಸವ ಪೂರ್ವದ ದೇವಾಂಗ ಕುಲದ ಮಹಾನುಭಾವ. ಆತ ವಚನಕಾರನಲ್ಲ. ಜೇಡರ ದಾಸಿಮಯ್ಯ ನೇಕಾರ(ಜೇಡರ)ಕುಲದ ಶರಣ. ಗುರು ಬಸವಣ್ಣನವರ ಸಮಕಾಲೀನ ಮತ್ತು ವಚನಕಾರ ಅದೇ ರೀತಿ ಕಾಂಚೀಪುರದ ಮಾದಾರ ಚನ್ನಯ್ಯ ಬೇರೆ, ಆತ ಬಸವ ಪೂರ್ವದ ಶಿವಭಕ್ತ, ಚೋಳರಾಜನ ಅರಮನೆಗೆ ಹುಲ್ಲು ಹಾಕುವ ಕಾಯಕದವನು. ಅನುಭವ ಮಂಟಪದ ಮಾದಾರ ಚನ್ನಯ್ಯ ಬೇರೆ. ಮನಸ್ಸು ಒಂದು ಅಂತರಿಂದ್ರಿಯ; ಇದು ಗಂಧೇಂದ್ರಿಯವಾದ ನಾಸಿಕ, ರಸನೇಂದ್ರಿಯವಾದ ನಾಲಿಗೆ, ದೃಶ್ಯೇಂದ್ರಿಯವಾದ ಕಣ್ಣು, ಸ್ಪರ್ಶೇಂದ್ರಿಯವಾದ ಚರ್ಮ, ಶಬ್ದೇಂದ್ರಿಯವಾದ ಕಿವಿ ಎಂಬ ಪಂಚ ಜ್ಞಾನೇಂದ್ರಿಯಗಳ ಮೂಲಕ ಬಹಿರ್ಮುಖವಾಗಿ ಹರಿದು ಕೆಲಸ ಮಾಡುತ್ತದೆ. ಆದ್ದರಿಂದ ಈ ಪಂಚೇಂದ್ರಿಯ ಇವುಗಳ ಪ್ರೇರಕ ಶಕ್ತಿಯಾದ ಮನಸ್ಸನ್ನು ದೈವೀಮುಖವಾಗಿ ಹರಿಸಿ ಉದಾತ್ತೀಕರಣ ಗೊಳಿಸಿದರೆ ಆ ದೇವನು ಒಲಿವನಲ್ಲವೆ?

ಮಹಾನುಭಾವರು ಅದನ್ನು ಸಾಧಿಸಿ ಲಿಂಗದೇವನನ್ನು ಒಲಿಸಿಕೊಂಡಿದ್ದಾರೆ; ನಾನು ಇದನ್ನು ಸಾಧಿಸಿಲ್ಲ. ಅದಕ್ಕಾಗಿ ದೇವನು ಒಲಿದಿಲ್ಲ ಅಷ್ಟೆ!

476. ಮನ ಮುಟ್ಟಿ ನೆನೆ

ಹೊರಗೆ ಹೂಸಿ ಏವೆನಯ್ಯಾ, ಒಳಗೆ ಶುದ್ಧವಾಗದನ್ನಕ್ಕ?
ಮಣಿಯ ಕಟ್ಟಿ ಏವೆನಯ್ಯಾ, ಮನ ಮುಟ್ಟದನ್ನಕ್ಕ?
ನೂರನೋದಿ ಏವೆನಯ್ಯಾ
ನಮ್ಮ ಲಿಂಗದೇವರ ಮನಮುಟ್ಟಿ ನೆನೆಯದನ್ನಕ್ಕ? - ಬ.ವ.ದೀ. 474

ಹೊರಗಡೆ ಹಣೆಯ ಮೇಲೆ, ಶರೀರದ ವಿವಿಧ ಭಾಗಗಳಲ್ಲಿ ವಿಭೂತಿಯನ್ನು ಪೂಸಿಕೊಂಡರೆ ಏನಂತೆ; ಒಳಗೆ ನನ್ನ ಮನಸ್ಸು ಶುದ್ಧವಾಗದಿದ್ದರೆ? ರುದ್ರಾಕ್ಷಿ ಮಣಿಗಳನ್ನು ದೇಹದ ವಿವಿಧ ಸ್ಥಾನಗಳಲ್ಲಿ ಕಟ್ಟಿದರೇನಂತೆ, ರುದ್ರಾಕ್ಷಿ ಸಂಕೇತಿಸುವ ಸಮ್ಯಕ್ ದೃಷ್ಟಿ ಮನದಲ್ಲಿ ಅಳವಡದಿದ್ದರೆ? ನೂರಾರು ಶಾಸ್ತ್ರ ಗ್ರಂಥಗಳನ್ನು ಓದಿದರೆ ಏನಂತೆ ಮನಃಪೂರ್ವಕವಾಗಿ ಲಿಂಗದೇವನನ್ನು ನೆನೆಯದಿದ್ದರೆ ಪ್ರಯೋಜನ ವೇನು?

ಯಾಂತ್ರಿಕವಾಗಿ ಧಾರ್ಮಿಕ ಕ್ರಿಯೆಗಳನ್ನು ಅಭ್ಯಾಸ ಬಲದಿಂದ ಮಾಡಿದರೆ ಏನಂತೆ ಮನಸ್ಸು ಪ್ರಾಮಾಣಿಕವಾಗಿ ದೇವಧ್ಯಾನದಲ್ಲಿ ತೊಡಗದಿದ್ದರೆ ಸಾಧನೆ ವ್ಯರ್ಥ.

477. ಮನದ ಕುಚೇಷ್ಟೆ

ಸುಚಿತ್ತದಿಂದ ನಿಮ್ಮ ನೆನೆಯಲೊಲ್ಲದೆನ್ನ ಮನವು,
ಎಂತಯ್ಯಾ? ಎನಗಿನ್ನಾವುದು ಗತಿ?
ಎಂತಯ್ಯಾ? ಎನಗಿನ್ನಾವುದು ಮತಿ?
ಎಂತಯ್ಯಾ? ಹರಹರಾ, ಲಿಂಗದೇವಾ, ಮನವ ಸಂತೈಸೆನ್ನ. - ಬ.ವ.ದೀ. 475

ಚಿತ್ತ, ಮನ, ಬುದ್ಧಿ, ಅಹಂ - ಈ ನಾಲ್ಕು ಅಂತಃಕರಣಗಳು. ಮನಸ್ಸೆಂಬ ಇಂದ್ರಿಯದಲ್ಲಿ ವಿವಿಧ ಪದರಗಳಿರುತ್ತವೆ. ಜಾಗ್ರತ ಮನ, ಅಜಾಗ್ರತ ಮನ, ಸುಪ್ತ ಮನ ಎಂಬುದಾಗಿ. ಸುಪ್ತ ಮನ ಎಂಬುದನ್ನೇ ಚಿತ್ತ ಎಂಬುದಾಗಿ ಹೇಳಬಹುದು. ಚಿತ್ತವು ಆಳವೂ ವಿಸ್ತಾರವೂ ಆಗಿದ್ದು ಈ ಜನ್ಮದ ನೆನಪು, ಅನುಭವಗಳನ್ನಷ್ಟೆ ಅಲ್ಲದೆ ಹಿಂದಿನ ಜನ್ಮಜನ್ಮಾಂತರಗಳ ನೆನಪು, ಅನುಭವಗಳನ್ನು ಸಂಗ್ರಹಿಸಿ

ಇಟ್ಟುಕೊಂಡಿರುತ್ತದೆ. ಮನಸ್ಸು ಎಂಬ ಮೇಲ್ಪದರದ ಭಾಗ ಮಂತ್ರಧ್ಯಾನವನ್ನು, ತುಟಿಯು ಮಂತ್ರ ಜಪವನ್ನು ಮಾಡುತ್ತಿದ್ದರೂ ಚಿತ್ತವು ಶುದ್ಧಿಯಾಗಿರದಿದ್ದರೆ ಏನೇನೋ ಆಲೋಚನೆಗಳು, ಭಾವನೆಗಳು ಹಾಯುತ್ತಿರುತ್ತವೆ. ಆಗ ಸಾಧಕನಿಗೆ ತುಂಬಾ ಕಸಿವಿಸಿಯಾಗುತ್ತದೆ. ಆ ಕಸಿವಿಸಿಯನ್ನೇ ಈ ವಚನದಲ್ಲಿ ಸಾಧಕ ಜೀವಿ ಬಸವಣ್ಣನವರು ತೋಡಿಕೊಂಡಿದ್ದಾರೆ.

ನನ್ನ ಚಿತ್ತವು ಸುಚಿತ್ತವಾಗಿ ದೈವೀಕರಣಗೊಂಡ ಸ್ಥಿತಿ ಹೊಂದಿ ನಿನ್ನನ್ನು ಮನವು ನೆನೆಯುತ್ತಿಲ್ಲ. ಏನು ಮಾಡಲಿ? ಎನಗಿನ್ನಾವುದು ಗತಿ? ಇನ್ನಾವುದು ಮತಿ? ಲಿಂಗದೇವಾ, ಮನಸ್ಸಿನ ಬೇರುಗಳಾದರೋ ಚಿತ್ತದಲ್ಲಿವೆ. ಅಲ್ಲಿ ಶುದ್ಧಿಯಾಗದೆ ಮನವು ಶುದ್ಧವಾಗದು. ಧ್ಯಾನಿಸಲು ಅಸಮರ್ಥವಾದ ಮನಸ್ಸನ್ನು ಸಂತೈಸು, ಪುಷ್ಟಿಗೊಳಿಸು.

478. ಮನದ ಸ್ಥಿರತೆ

ಅಷ್ಟದಳ ಕಮಲವ ಸುತ್ತುವ ಜೀವಾತ್ಮನ
ಮೆಟ್ಟಿದ ದಳವನರಿಯದೆ,
ಆನು ಭಕ್ತನೆಂತೆಂಬೆ? ಆನು ಶರಣನೆಂತೆಂಬೆ?
ಆನು ಲಿಂಗೈಕ್ಯನೆಂತೆಂಬೆ ಲಿಂಗದೇವಾ,
ಎನ್ನ ಮನವು ಸಮಾಧಾನವಾಗದನ್ನಕ್ಕ? - ಬ.ವ.ದೀ. 476

ಮಾನವ ದೇಹದಲ್ಲಿ ಚಕ್ರಗಳೆಂಬ ನರ ಕೇಂದ್ರಗಳು 6; ಇವುಗಳಿಗೆ ಷಟ್‌ಚಕ್ರ ಎನ್ನುವರು. ಇನ್ನೂ ಸೂಕ್ಷ್ಮವಾದವು 3, ಎಲ್ಲ ಸೇರಿ ನವಚಕ್ರಗಳು ಅಂದರೆ 9. ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ ಮತ್ತು ಆಜ್ಞಾ. ಆತ್ಮಚೈತನ್ಯ ದೇಹದಲ್ಲೆಲ್ಲೆಡೆ ಸರ್ವವ್ಯಾಪಿಯಾಗಿ ಇದ್ದರೂ ಹೃದಯ ಕಮಲದಲ್ಲಿ ವಿಶೇಷವಾಗಿ ನೆಲೆಸಿರುತ್ತದೆ. ಈ ಹೃದಯ ಕಮಲವು ಅಷ್ಟದಳದಿಂದ ಕೂಡಿದ್ದು ಜೀವಾತ್ಮವು ಇದರಲ್ಲಿ ಭ್ರಮರವಾಗಿ ಸಂಚರಿಸುತ್ತಿರುತ್ತದೆ. ಲಿಂಗಾಯತ ಧರ್ಮದ ದರ್ಶನ ಶಾಸ್ತ್ರವಾದ ಷಟ್‌ಸ್ಥಲದಲ್ಲಿ ಸಾಧಕನು ಹಂತಹಂತವಾಗಿ ಮಾನಸಿಕವಾಗಿ ಮೇಲೇರುವುದಲ್ಲದೆ ಯೋಗಸಾಧನೆಯಲ್ಲೂ ಮುಂದುವರಿ ಯುವನು. ಜೀವಾತ್ಮವು ಹೃದಯ ಕಮಲದಲ್ಲಿ ಜಾಗೃತ ಗೊಂಡಾಗ (ದಳವನ್ನು ಮೆಟ್ಟಿದಾಗ) ಅಲ್ಲಿ ಓಂಕಾರನಾದವು - ಅನಾಹತನಾದವೆಂದು ಇದಕ್ಕೆ ಹೆಸರು, ಮಿಡಿಯುತ್ತದೆ. ಈ ನಾದವನ್ನು ಕೇಳದ ಹೊರತು, ದಿವ್ಯಾನುಭವವನ್ನು ಹೊಂದದ ಹೊರತು ನಾನು ಭಕ್ತ ಎಂದು ಹೇಗೆ ಅಂದುಕೊಳ್ಳಲಿ? ಶರಣ ಎಂದು ಹೇಗೆ ಭಾವಿಸಲಿ? (ಭಾವ)ಲಿಂಗೈಕ್ಯ ಎಂದು ಹೇಗೆ ತಿಳಿದುಕೊಳ್ಳಲಿ? ಈ ದಿವ್ಯಾನುಭವ ಹೊಂದಿ ಮನಸ್ಸು ಸ್ಥಿರಗೊಂಡು ಸಮಾಧಾನವು ಪ್ರಾಪ್ತಿಯಾದಾಗಲೇ ನನಗೆ ಸಂತೃಪ್ತಿ. ತುಂಬಿಯು ಮಕರಂದವನ್ನು ಪಾನ ಮಾಡುತ್ತ ಹೂವಿನ ಮಧ್ಯದಲ್ಲೇ ಮೈಮರೆಯುವಂತೆ ದೇವನ ನೆನಹನ್ನು ತುಂಬಿಕೊಂಡು ಮನಸ್ಸು ಮೈಮರೆತಾಗಲೇ ನನಗೆ ಸಮಾಧಾನ ಎನ್ನುತ್ತಾರೆ ಗುರು ಬಸವಣ್ಣನವರು.

479. ದೇವ ವಿರಹ

ನಾ ನಿಮ್ಮ ನೆನೆವೆನು, ನೀವೆನ್ನ ಅರಿಯಿರಿ
ನಾ ನಿಮ್ಮನೋಲೈಸುವೆನು; ನೀವೆನ್ನ ಕಾಣೆರಿ.
ನಾನೆಂತು ಬದುಕುವೆನೆಂತು ಜೀವಿಸುವೆನಯ್ಯಾ?
ಲಿಂಗದೇವಾ, ಎನಗೆ ನೀವೆ ಪ್ರಾಣ ಗತಿ ಮತಿ, ನೋಡಯ್ಯಾ - ಬ.ವ.ದೀ. 477

ಸಾಧಕರ ಜೀವನದಲ್ಲಿ ಕಾಳರಾತ್ರಿ ಎಂಬ ಮನಃಸ್ಥಿತಿ ಬರುವುದುಂಟು. ಆಗ ಸಾಧಕನ ಹೃದಯ ದೇವ ವಿರಹ(Aspriration f or God)ದಿಂದ ಮಿಡುಕುವುದುಂಟು. ಲೌಕಿಕ ಪ್ರೇಮಿಗಳ ವಿರಹಕ್ಕಿಂತಲೂ ಇದು ಉತ್ಕಟವಾಗಿರುವುದು. ಆಗ ಸಾಧಕ ಹೇಳುವನು, "ನನ್ನದು ಒಮ್ಮುಖದ

ಪ್ರೇಮವೇ ಎಂಬ ಸಂದೇಹ ಬರುತ್ತಿದೆ. ದೇವಾ, ನಾನು ನೋಡಿದರೆ ನಿಮ್ಮನ್ನು ಸದಾ ನೆನೆಯುತ್ತೇನೆ. ನೀವು ನೋಡಿದರೆ ನನ್ನನ್ನು ಕಣ್ಣೆತ್ತಿಯೂ ನೋಡುತ್ತಿಲ್ಲ. ನಾ ನಿಮ್ಮನ್ನು ಅತೀವವಾಗಿ ಪ್ರೀತಿಸುತ್ತ ಓಲೈಸುತ್ತ, ನಿನ್ನ ಒಲುಮೆಗಾಗಿ ಪ್ರತಿಕ್ಷಣವು ನಿರೀಕ್ಷಿಸುತ್ತೇನೆ. ಆದರೆ ನಿಮಗೆ ಮಾತ್ರ ನನ್ನ ಸ್ಥಿತಿ ಕಾಣಿಸುತ್ತಿಲ್ಲ. ನಿಮ್ಮ ಒಲುಮೆ ಇಲ್ಲದೆ ನಾನು ಹೇಗೆ ಬದುಕಲು ಸಾಧ್ಯ, ಜೀವಿಸಲು ಸಾಧ್ಯ? ಲಿಂಗದೇವಾ, ಎನಗೆ ನೀವೇ ಪ್ರಾಣ, ಗತಿ (ಭವಿಷ್ಯ), ಮತಿ (ಚಿಂತನೆ) ನೋಡು.

ಒಬ್ಬ ವಿರಹಿಯ ಉತ್ಕಟ ಮನೋಗತಿಯನ್ನು ಅತ್ಯಂತ ಶಕ್ತಿಯಾಗಿ, ಸಮರ್ಪಕವಾಗಿ ಚಿತ್ರಿಸುವ ಅಧ್ಯಾತ್ಮಿಕ ವಚನವಿದು. ಇಂಥ ಉಕ್ತಿಗಳು ಅನುಭಾವ ಶಾಸ್ತ್ರ (Mysticism)ದ ಅಮೂಲ್ಯ ರತ್ನಗಳು. ಅನೇಕ ಮಹಾ ಪುರುಷರು ಉದಾಃ ಏಸುಕ್ರಿಸ್ತ, ಮೊಹಮ್ಮದ್ ಪೈಗಂಬರ್, ಗುರು ನಾನಕ ಮುಂತಾದವರು ದೇವನನ್ನು ಬೌದ್ಧಿಕವಾಗಿ ಪದಮೋಚ್ಚ ಸ್ಥಾನದಲ್ಲಿಟ್ಟು ಗೌರವಿಸಿರಬಹುದು, ಪ್ರಾರ್ಥಿಸಿರ ಬಹುದು, ಬಣ್ಣಿಸಿರಬಹುದು. ಆದರೆ ಪುರುಷರಾಗಿಯೂ ಶರಣ ಸತಿ ಭಾವದಿಂದ ಉತ್ಕಟವಾಗಿ ಪ್ರೀತಿಸಿರುವುದು ಗುರು ಬಸವಣ್ಣನವರು ಮತ್ತು ಉರಿಲಿಂಗಪೆದ್ದಿಯಂತಹ ಕೆಲವೇ ಶರಣರು ಮಾತ್ರ ಎಂದು ಹೇಳ ಬಹುದು.

480. ಶರಣಾಗತಿ

ತಂದೆ ನೀನು ತಾಯಿ ನೀನು;
ಬಂಧು ನೀನು ಬಳಗ ನೀನು,
ನೀನಲ್ಲದೆ ಮತ್ತಾರೂ ಇಲ್ಲವಯ್ಯಾ
ಲಿಂಗದೇವಾ, ಹಾಲಲ್ಲದ್ದು ನೀರಲ್ಲದ್ದು. - ಬ.ವ.ದೀ. 478

ಈ ಪುಟ್ಟ ವಚನವೂ ಗುರು ಬಸವಣ್ಣನವರ ಅಮೂಲ್ಯ ಮತ್ತು ಜನಪ್ರಿಯ ವಚನಗಳಲ್ಲಿ ಒಂದು. ಚಿಕ್ಕ ಮಕ್ಕಳಿಗೆ ಮಾತು ಬರುತ್ತಿದ್ದಂತೆಯೇ ತಾಯಿ ತಂದೆ ಕಲಿಸುವ ಮೊದಲ ವಚನವಿದು. ತತ್ವಜ್ಞಾನದ ಸಾರವೇ ಇದರಲ್ಲಿ ಗುಪ್ತವಾಗಿ ಅಡಗಿದೆ. ಸೃಷ್ಟಿಕರ್ತ ಪರಮಾತ್ಮನು ಈ ಜಗತ್ತಿನ ತಂದೆ, ಆದಿ ಕಾರಣ. (Primal Cause) ತಾನೆಲ್ಲಕ್ಕೂ ಆದಿಯಾಗಿ, ಕಾರಣವಾಗಿ ತನಗೊಂದು ಕಾರಣವಿಲ್ಲದಿರುವ ಚೈತನ್ಯವೇ ದೇವರು. ದೇವನು ತಂದೆಯೂ ಅಹುದು, ತಾಯಿಯು ಅಹುದು. ಪ್ರತಿಯೊಂದು ವಸ್ತುವಿಗೂ ಕಾರಣಗಳು ಎರಡು. 1. ನಿಮಿತ್ತ ಕಾರಣ (Efficient Cause) 2. ಉಪಾದಾನ ಕಾರಣ (Material Cause) ಎಂಬುದಾಗಿ. ಈ ಜಗತ್ತಿಗೆ ಪರಮಾತ್ಮನೇ ನಿಮಿತ್ತ ಕಾರಣ -ತಂದೆಯೂ ಅಹುದು, ತಾಯಿ - ಉಪಾದಾನ ಕಾರಣವೂ ಅಹುದು. ಆ ಲಿಂಗದೇವನು ತಂದೆಯಾಗಿ ಜಗತ್ತಿಗೆ, ಜೀವಾತ್ಮರಿಗೆ ಕಾರಣೀಭೂತನಾಗುವುದೇ ಅಲ್ಲದೆ ತಾಯಿಯಂತೆ ಸಲಹುವವನೂ ಅಹುದು. ಅದಕ್ಕಾಗಿಯೇ ತತ್ವಜ್ಞಾನಿ ಬಸವಣ್ಣನವರು ದೇವರನ್ನು ಕುರಿತು ತಂದೆ ನೀನು, ತಾಯಿ ನೀನು ಎಂದು ಹೇಳಿದ್ದಾರೆ. ಇಷ್ಟು ಮಾತ್ರವಲ್ಲ ದೇವನು ಕಷ್ಟಸುಖಗಳಲ್ಲಿ ಪಾಲುಗಾರನಾಗುವ ಬಂಧು ಬಳಗವೂ ಅಹುದು. ಹೀಗಾಗಿ ನಿನ್ನ ಹೊರತು ನಿಜವಾದ ರಕ್ಷಕರು ಬೇರಾರೂ ಇಲ್ಲ ಎನ್ನುತ್ತಾರೆ. ಆತ್ಮ ಸಂಗಾತಿಯಾದ ದೇವರೇ ಶಾಶ್ವತವಾದ ಒಡನಾಡಿ. ಆದ್ದರಿಂದ ನನ್ನನ್ನು ಹಾಲಲ್ಲಾದರೂ ಅದ್ದು, ನೀರಲ್ಲಾದರೂ ಅದ್ದು ಎಂದು ಲಿಂಗದೇವನಿಗೆ ಅಖಂಡ ನಿಷ್ಠೆಯಿಂದ ಶರಣಾಗುತ್ತಾರೆ.

481. ಸರ್ವಸ್ವವೂ ದೇವನೆ !

ಎನ್ನ ಆಪತ್ತು ಸುಖ -ದುಃಖ ನೀನೇ ಕಂಡಯ್ಯ
ಮತ್ತಾರೂ ಇಲ್ಲ, ಹರಹರಾ, ನೀವೆ ಕಂಡಯ್ಯಾ,

ಎನ್ನ ಮಾತಾ ಪಿತನೂ ನೀನೆ ಕಂಡಯ್ಯಾ. ಲಿಂಗದೇವಾ. - ಬ.ವ.ದೀ. 479

ನನ್ನ ಆಪತ್ತಿನಲ್ಲಿ, ಸುಖದಲ್ಲಿ, ದುಃಖದಲ್ಲಿ ಎಲ್ಲದರಲ್ಲೂ ದೇವಾ ನೀನು ನನ್ನ ಸಹಭಾಗಿ ಮತ್ತು ರಕ್ಷಕ. ನಿನ್ನ ಹೊರತು ಇನ್ನಾರನ್ನೂ ನಾನು ನಂಬಿಲ್ಲ. ನನ್ನ ತಾಯಿ ತಂದೆ ಎಲ್ಲವೂ ನೀನೆ.

482. ದೇವನು ಧರ್ಮವಂತ!

ಎನ್ನ ಜನ್ಮವ ತೊಡೆದ ನೀ ಧರ್ಮಿ,
ಎನ್ನ ಜನ್ಮವನತಿಗಳೆದ ಧರ್ಮಿ
ಎನ್ನ ಭವಬಂಧನವ ನಿಃಕರಿಸಿದೆಯಾಗಿ
ಶಿವನೆ ಗತಿಮತಿಯೆಂದು ನಂಬಿದೆನಯ್ಯಾ
ಎನ್ನ ಅಷ್ಟಮದಂಗಳ ಸುಟ್ಟುರುಹಿದೆಯಾಗಿ,
ಕಟ್ಟುಗ್ರದಿಂದ ನಿಮ್ಮ ಶ್ರೀ ಚರಣವ ಕಂಡೆ,
ಸೃಷ್ಟಿ ಪ್ರತಿಪಾಲಕಾ, ನಿಮ್ಮ ನಂಬಿದೆ, ಕರುಣಿಸು, ಲಿಂಗದೇವಾ.
- ಬ.ವ.ದೀ. 480

ಲಿಂಗದೇವಾ, ನೀನು ಬಹುದೊಡ್ಡ ಧರ್ಮಿ (ಧರ್ಮವಂತ); ಏಕೆಂದರೆ, ನನ್ನ ಜನ್ಮವನ್ನು ನಿರ್ಮೂಲನೆ ಮಾಡಿದೆ. ಪ್ರತಿಯೊಬ್ಬ ಮಾನವನೂ ಭವದಲ್ಲಿ ಬಂದಾಗ ಅಜ್ಞಾನಿಯಾಗಿರುತ್ತಾನೆ. ಆದರೆ ಬಹುಪಾಲು ಜನರು ತಾವು ಭವಬಂಧನದಲ್ಲಿದ್ದೇವೆ ಎಂಬ ಅರಿವು ಇಲ್ಲದೆ ಅಜ್ಞಾನದಲ್ಲೇ ತೊಳಲಾಡುತ್ತಾರೆ. ಆದರೆ ನಾನು ಆ ಅಜ್ಞಾನದಿಂದ ಹೊರಬರುವಂತೆ ನೀನು ಮಾಡಿದ್ದೀಯೆ! ಮಾತ್ರವಲ್ಲ ನಾನು ಅಧ್ಯಾತ್ಮಿಕ ಪುನರ್ಜನ್ಮವನ್ನು ಪಡೆಯುವಂತೆ ಮಾಡಿದ ನೀನು ಸದ್ಧರ್ಮಿ. ಈ ರೀತಿ ಭವಬಂಧನವನ್ನು ತೊಡೆದ ನಿನ್ನನ್ನೇ ನನ್ನ ಗತಿ, ಮತಿ ಎಂದು ನಂಬಿದ್ದೇನೆ. ಸ್ವಭಾವಜನ್ಯವಾದ ಅಷ್ಟಮದಗಳನ್ನು (ಕುಲ, ಛಲ, ಧನ, ರೂಪ, ಯೌವನ, ವಿದ್ಯೆ, ರಾಜ್ಯ, ತಪ) ನೀನು ಸುಟ್ಟು ಉರುಹಿದೆಯಾಗಿ ಅತ್ಯಂತ ದೃಢನಿಷ್ಠೆಯಿಂದ ನಾನು ನಿಮ್ಮ ಶ್ರೀ ಚರಣವನ್ನು ಹಿಡಿಯಲು ಸಾಧ್ಯ ವಾಯಿತು. ಸೃಷ್ಟಿಯನ್ನು ಪಾಲನೆ ಮಾಡುತ್ತಿರುವ ಲಿಂಗದೇವನೆ ನಿನ್ನನ್ನು ದೃಢವಾಗಿ ನಂಬಿದ್ದೇನೆ. ನನ್ನನ್ನು ಅನುಗ್ರಹಿಸು.

483. ಭವರೋಗ ವೈದ್ಯ

ಭವರೋಗ ವೈದ್ಯನೆಂದು ನಾ ನಿಮ್ಮ ಮೊರೆಹೊಕ್ಕೆ
ಭಕ್ತಿದಾಯಕ ನೀ ಕರುಣಿಸು ಲಿಂಗತಂದೆ,
ಜಯ ಜಯ ಶ್ರೀ ಮಹಾದೇವನೆನುತ್ತಿದ್ದಿತ್ತೆನ್ನ ಮನವು.
ಲಿಂಗದೇವಂಗೆ ಶರಣೆಂದಿತ್ತೆನ್ನ ಮನವು. - ಬ.ವ.ದೀ. 481

ಭವ ಎನ್ನುವ ಕಾಯಿಲೆಗೆ ಸೂಕ್ತ ಚಿಕಿತ್ಸೆ ಮಾಡುವ ವೈದ್ಯ ನೀನು ಎಂದು ನಂಬಿ ನಾನು ನಿನಗೆ ಶರಣು ಬಂದಿದ್ದೇನೆ. ಈ ರೋಗಕ್ಕೆ ಅತ್ಯುತ್ತಮ ಮದ್ದೆಂದರೆ ಭಕ್ತಿ. ಅದನ್ನೂ ನೀನೇ ನೀಡಬೇಕು. ನೀನು ಮುಕ್ತಿದಾತನಷ್ಟೇ ಅಲ್ಲ, ಭಕ್ತಿದಾಯಕನೂ ಅಹುದು. ಲಿಂಗತಂದೆಯೇ ಅಂತಹ ಭಕ್ತಿಯನ್ನೂ ಕರುಣಿಸು. ಜಯ ಜಯ ಶ್ರೀ ಮಹಾದೇವ ಎಂದು ನನ್ನ ಮನಸ್ಸು ಸತತವಾಗಿ ನಿನ್ನನ್ನು ಭಜಿಸುತ್ತಿದೆ. ನಿನಗೆ ಸಂಪೂರ್ಣವಾಗಿ ಶರಣಾಗಿದೆ.

ಸಾಕ್ಷಾತ್ಕಾರಕ್ಕೆ ಮೊದಲು, ಸಾಧುಕರಿದ್ದಾಗ ಬಸವಣ್ಣನವರು ಈ ವಚನವನ್ನು ಹಾಡಿಕೊಂಡಿದ್ದಾರೆ.

ಭಕ್ತನ ಶರಣ ಸ್ಥಲ

484. ದಿವಾನುಭವಕ್ಕಾಗಿ ಹಂಬಲ

ಅಂಗೈಯೊಳಗಣ ಲಿಂಗವ ನೋಡುತ್ತ
ಕಂಗಳು ಕಡೆಗೋಡಿವರಿಯುತ್ತ ಸುರಿಯುತ್ತ ಎಂದಿಪ್ಪೆನೊ?
ನೋಟವೆ ಪ್ರಾಣವಾಗಿ ಎಂದಿಪ್ಪೆನೊ?
ಕೂಟವೆ ಪ್ರಾಣವಾಗಿ ಎಂದಿಪ್ಪೆನೊ?
ಎನ್ನ ಅಂಗವಿಕಾರದ ಸಂಗವಳಿದು
ಲಿಂಗದೇವಯ್ಯಾ, ಲಿಂಗ ಲಿಂಗವೆನ್ನುತ್ತ. - ಬ.ವ.ದೀ. 482

ಗುರು ಬಸವಣ್ಣನವರ ಜೀವನ, ಹಂತಹಂತವಾಗಿ ಸಾಗಿದ ಸಾಧನೆಯನ್ನು ಅನುಸರಿಸಿ ಅವರ ವಚನಗಳನ್ನು ಜೋಡಿಸದೆ ಇರುವುದರಿಂದ ಅವು ಎಲ್ಲಿಲ್ಲಿಯೋ ಚದುರಿದಂತೆ ಇರುತ್ತವೆ. ಹೀಗಾಗಿ ಯಾವುದೇ ವಚನವನ್ನು ಅದು ಬರೆಯಲ್ಪಟ್ಟ ಹಿನ್ನೆಲೆಯಲ್ಲಿ ನಾವು ಅರ್ಥಮಾಡಬೇಕಾಗುತ್ತದೆ.

ತರುಣ ಬಸವಣ್ಣನವರ ಕನಸು ನನಸಾಗಿದೆ. ನಿರಾಕಾರ ದೇವನನ್ನು ಮನುಷ್ಯರ, ಪಶು ಪಕ್ಷಿಗಳ ಆಕಾರದಲ್ಲಿ ಸಾಕಾರಗೊಳಿಸದೆ ದೇವನ ಕೃತಿಯಾದ ಬ್ರಹ್ಮಾಂಡದ ಆಕಾರದಲ್ಲಿ ಸಾಕಾರಗೊಳಿಸಿ ಇಷ್ಟಲಿಂಗವನ್ನು ರೂಪಿಸಿದ್ದಾಗಿದೆ. ಈ ಇಷ್ಟಲಿಂಗವು ಹಲವಾರು ಉದ್ದೇಶಗಳನ್ನು ಪೂರೈಸಬೇಕೆಂಬ ಹಂಬಲ ಗುರು ಬಸವಣ್ಣನವರದಾಗಿತ್ತು. 1. ತಾತ್ವಿಕ ಹಿನ್ನೆಲೆ 2. ಗಣಲಾಂಛನ 3. ತ್ರಾಟಕ ಯೋಗಕ್ಕೆ ಸಾಧನ. ವಿಶ್ವದಾಕಾರದಲ್ಲಿ ಸೃಷ್ಟಿಕರ್ತನ ಕುರುಹು ಎಂಬುದೇ ಇಷ್ಟಲಿಂಗದ ತಾತ್ವಿಕ ಹಿನ್ನೆಲೆ. ಇಂಥ ಇಷ್ಟಲಿಂಗವನ್ನು ಪಡೆದವರೆಲ್ಲರೂ ಧಾರ್ಮಿಕವಾಗಿ ಸಹೋದರರು ಎಂಬ ಪರಿಕಲ್ಪನೆಯನ್ನು ಇನ್ನು ಮುಂದೆ ಪ್ರಯೋಗಕ್ಕೆ ತರಬೇಕಿತ್ತು. ಪೂಜಿಸುವ ವಸ್ತುವೇ ಬೇರೆ, ಯೋಗಕ್ಕೆ, ಧ್ಯಾನಕ್ಕೆ ಬಳಸುವ ವಸ್ತುವೇ ಬೇರೆ ಎಂಬ ಪದ್ಧತಿಯನ್ನು ತಪ್ಪಿಸಿ, ಪೂಜಿಸಲ್ಪಡುವ ವಸ್ತುವೇ ದೃಷ್ಟಿಯೋಗಕ್ಕೆ ಸಾಧನವಾಗಬೇಕೆಂದು ಇಷ್ಟಲಿಂಗವನ್ನು ರೂಪಿಸಲಾಗಿತ್ತು. ಇಂಥ ಇಷ್ಟಲಿಂಗವನ್ನು ಅಂಗೈಯಲ್ಲಿ ಇರಿಸಿಕೊಂಡು ತ್ರಾಟಕ ಯೋಗವನ್ನು ಅಭ್ಯಾಸ ಮಾಡಬೇಕೆಂಬ ಹಂಬಲ ಮಿಡಿಯುತ್ತಿದೆ. ಈ ಭಾವವು ಪ್ರಸ್ತುತ ವಚನದಲ್ಲಿ ಅಭಿವ್ಯಕ್ತವಾಗಿದೆ.

ಅಂಗೈಯ ಒಳಗೆ ಇಷ್ಟಲಿಂಗವನ್ನು ಇಟ್ಟುಕೊಂಡು, ಅದನ್ನು ದಿಟ್ಟಿಸಿ ನೋಡುತ್ತಾ,ಅದರ ಪರಿಣಾಮವಾಗಿ ಕಣ್ಣಿನ ತುದಿಯಿಂದ ನೀರು ಹರಿಯುತ್ತ ಸುರಿಯುತ್ತ (ಅದು ಆನಂದ ಬಾಷ್ಪವೂ ಆಹುದು) ಎಂದಿರುವೆನೊ? ದಿಟ್ಟಿಸಿ ನೋಡುವ ನೋಟವೇ ಪ್ರಾಣವಾಗಿ, ಅದರ ಪರಿಣಾಮವಾಗಿ ಲಿಂಗಾಂಗ ಸಾಮರಸ್ಯ (ಕೂಟ)ವೇ ಪ್ರಾಣವಾಗಿ ಎಂದಿರುವೆನೊ? ಶರೀರದ ವಿಕಾರಗಳು ಅಳಿದು ಸರ್ವಾಂಗದಲ್ಲಿಯೂ ದೇವನನ್ನೇ ತುಂಬಿಕೊಂಡು ದೇವನ ನೆನಹಿನಲ್ಲಿಯೇ ಕರಗಿ ಹೋಗುತ್ತ ಇರಲು ಸಾಧಕರಾದ ಗುರು ಬಸವಣ್ಣನವರು ಹಂಬಲಿಸುತ್ತಾರೆ ಈ ವಚನದಲ್ಲಿ.

485. ದೇವನಿಗಾಗಿ ಹಂಬಲ

ಎದೆ ಬಿರಿವನ್ನಕ್ಕ, ಮನ ದಣಿವನ್ನಕ್ಕ
ನಾಲಿಗೆ ನಲಿನಲಿದಾಡುವನ್ನಕ್ಕ
ನಿಮ್ಮ ನಾಮಾಮೃತವ ತಂದೆರೆಸು ಕಂಡಯ್ಯಾ,
ಎನಗೆನ್ನ ತಂದೆ!
ಬಿರಿಮುಗುಳಂದದಿ ಎನ್ನಯ ಹೃದಯ
ನಿಮ್ಮ ಶ್ರೀ ಚರಣದ ಮೇಲೆ ಬಿದ್ದರಳುಗೆ, ಲಿಂಗದೇವಾ. -ಬ.ವ.ದೀ. 483

ಅತೀವ ಸಂತೋಷವಾದಾಗ (ಅತಿ ದುಃಖವಾದಾಗಲೂ ಕೂಡ) ಹೃದಯವು ಬಿರಿಯುತ್ತದೆ ಎಂದೆನ್ನಲಾಗುವುದು. ಹಾಗೆ ಎದೆಯು ಹರ್ಷಾತಿರೇಕದಿಂದ ಬಿರಿಯುವ ತನಕ, ಮನಸ್ಸು ದೇವನ ನೆನಹನ್ನು ಮಾಡಿ ಮಾಡಿ ದಣಿಯುವವರೆಗೂ (ಆಯಾಸಗೊಳ್ಳುವವರೆಗೂ) (ತಣಿವನ್ನಕ್ಕ ಎಂಬುದಾಗಿ ಹೇಳಿದಾಗ ಅದು ತೃಪ್ತಿಗೊಳ್ಳುವವರೆಗೂ ಎಂದಾಗುತ್ತದೆ) ನಾಲಿಗೆಯು ಜಪವನ್ನು ಮಾಡಿ ಸಂತಸದಲ್ಲಿ ನಲಿದು, ಓಲಾಡುವ ತನಕ ನಿಮ್ಮ ನಾಮ ಎಂಬ ಅಮೃತವನ್ನು ಎನ್ನ ಹೃದಯ, ಮನಸ್ಸು, ನಾಲಿಗೆಗೆ ತುಂಬು. ಬಿರಿ ಮುಗುಳು ಅಂದರೆ ಅರ್ಧ ಬಿರಿದ ಮೊಗ್ಗಿನಂತೆ ಇರುವ ಎನ್ನ ಹೃದಯ ಲಿಂಗದೇವಾ ನಿಮ್ಮ ಶ್ರೀ ಪಾದದ ಮೇಲೆ ಬಿದ್ದು ಅರಳುವಂತಾಗಲಿ ಎಂದು ಗುರು ಬಸವಣ್ಣನವರು ಪ್ರಾರ್ಥಿಸುತ್ತಾರೆ. ತೀರಾ ಚಿಕ್ಕ ಮೊಗ್ಗನ್ನು ಕಿತ್ತರೆ ಅದು ಅರಳುವುದೇ ಇಲ್ಲ. ಅರೆಬಿರಿದ ಮೊಗ್ಗನ್ನು ಬಿಡಿಸಿ ತಂದು ಇಟ್ಟರೆ ಅದು ಬುಟ್ಟಿಯಲ್ಲೇ ಅರಳಿರುವುದು. ಅಜ್ಞಾನಿಯ ಹೃದಯ ಎಳೆಯ ಮೊಗ್ಗಿನಂತಿದ್ದರೆ ದೇವನಿಗಾಗಿ ಹಂಬಲಿಸುವ ಹೃದಯವು ಬಿರಿ ಮುಗುಳು ಅಂದರೆ ಅರ್ಧಬಿರಿದ ಮೊಗ್ಗಿನಂತಿರುತ್ತದೆ.

486. ಅತ್ಯುತ್ಸಾಹ

ಆಡಿ ಕಾಲು ದಣಿಯವು, ನೋಡಿ ಕಣ್ಣು ದಣಿಯವು,
ಹಾಡಿ ನಾಲಿಗೆ ದಣಿಯದು - ಇನ್ನೇವೆ ಇನ್ನೇವೆ?
ನಾ ನಿಮ್ಮ ಕೈಯಾರೆ ಪೂಜಿಸಿ, ಮನದಣಿಯಲೊಲ್ಲದಿನ್ನೇವೆನಿನ್ನೇವೆ?
ಲಿಂಗದೇವ ಕೇಳಯ್ಯಾ,
ನಿಮ್ಮುದರವ ಬಗಿದಾನು ಹೋಗುವ ಭರವೆನಗೆ. - ಬ.ವ.ದೀ. 484

ಶರಣ ಬಂಧುಗಳೊಡನೆ ಸಾಮೂಹಿಕವಾಗಿ ಭಜನೆ ಮಾಡುವಾಗ, ಹಾಡುವಾಗ. ಮೆರವಣಿಗೆಯಲ್ಲಿ ಸಾಗುವಾಗ ಭಕ್ತಿಪೂರ್ಣವಾಗಿ ನರ್ತನ ಮಾಡುವುದು ಬಹು ಸಂತೋಷದಾಯಕ. ತಮಿಳುನಾಡಿನ ಊಟಿಯ ಪರಿಸರದ ಸಕಲಟ್ಟಿ ಶರಣ-ಶರಣೆಯರು ವಚನಗಳನ್ನು ಭಾವಪೂರ್ಣ, ಭಕ್ತಿಪೂರ್ಣವಾಗಿ ಹಾಡುತ್ತ ಜೊತೆಗೆ ನವಿರಾಗಿ ನರ್ತನ ಮಾಡುವುದನ್ನು ನೋಡಿದರೆ ಹೃದಯ ತುಂಬಿ ಬರುತ್ತದೆ. (ಕೆಲವರು ಸನ್ಮೋಹನಕ್ಕೊಳಗಾದವರಂತೆ ಬಟ್ಟೆಯ ಪರಿವೆ ಇಲ್ಲದೆ ಕುಣಿಯುವರು. ಇನ್ನು ಕೆಲವರು ಶಕ್ತಿದೇವತೆಯ ಆರಾಧಕರು ಭಯಂಕರವಾಗಿ ಕುಣಿಯುವರು. ಇವೆಲ್ಲವು ಸುಸಂಸ್ಕೃತ ಎನಿಸುವುದಿಲ್ಲ.)

"ಭಕ್ತಿಭಾವ ಪೂರ್ಣವಾಗಿ ಎಷ್ಟೇ ನರ್ತನ ಮಾಡಿದರೂ ನನ್ನ ಕಾಲು ದಣಿಯುವುದಿಲ್ಲ (ಆಯಾಸಗೊಳ್ಳುವುದಿಲ್ಲ), ತ್ರಾಟಕ ಯೋಗವನ್ನು ಮಾಡುತ್ತ ಎಷ್ಟು ಹೊತ್ತು ಕುಳಿತರೂ ಕಣ್ಣುಗಳು ದಣಿಯುವುದಿಲ್ಲ. ದೇವನ ಸ್ಮರಣೆ ಮಾಡುತ್ತ ಎಷ್ಟು ಹಾಡಿದರೂ ನನ್ನ ನಾಲಿಗೆಯು ದಣಿಯುವುದಿಲ್ಲ; ಇನ್ನೂ ಏನು ಮಾಡಲಿ ಎಂಬ ಉತ್ಸಾಹವು ಚಿಮ್ಮುತ್ತದೆ. ನಾನು ನಿಮ್ಮನ್ನು ಕೈಯಾರೆ ಪೂಜಿಸುತ್ತೇನೆ. ಎಷ್ಟು ಪೂಜಿಸಿದರೂ ಮನಸ್ಸು ದಣಿಯುವುದಿಲ್ಲ. ಲಿಂಗದೇವನೆ; ನಿಮ್ಮ ಹೊಟ್ಟೆಯನ್ನು ಸೀಳಿಕೊಂಡು ಒಳಗೆ ನುಗ್ಗುವ ಉತ್ಸಾಹ (ಸಂಭ್ರಮ) ನನ್ನದು."

"ನಿಮ್ಮುದರವ ಬಗಿದಾನು ಹೊಗುವ ಭರವೆನಗೆ" ಎಂಬ ಪ್ರಯೋಗ ಸಾಧಕ ಜೀವಿ ಬಸವಣ್ಣನವರ ಅತ್ಯುತ್ಸಾಹ, ಸಂಭ್ರಮವನ್ನು ಅಭಿವ್ಯಕ್ತಗೊಳಿಸುತ್ತದೆ. ಒಂದು ಮುದ್ದುಮಗುವನ್ನು ಕಂಡು ಪ್ರೀತಿ ಉಕ್ಕಿದಾಗ "ನಿನ್ನನ್ನು ಕಚ್ಚಿ ತಿನ್ನಬೇಕೆನಿಸುತ್ತದೆ" ಎಂದರೆ ಅದು ವಾತ್ಸಲ್ಯದ ಉತ್ಕಟತೆಯನ್ನು ತೋರಿಸುತ್ತದೆ. ಲಿಂಗದೇವನ ಸಾಮರಸ್ಯದ ಆನಂದವನ್ನು ಅನುಭವಿಸಬೇಕೆಂಬ ಆತುರ ಈ ವಾಕ್ಯದಲ್ಲಿ ವ್ಯಕ್ತವಾಗಿದೆ.

487. ಅಗಲಲಾರದ ಪ್ರೇಮ

ಕಾಮಸಂಗ ನಿಸ್ಸಂಗವಾಗಿ ಇನ್ನಾವ ಸಂಗವನರಿಯೆನಯ್ಯಾ.
ಮಿಗೆ ಒಲಿದೆನಾಗಿ ಅಗಲಲಾರೆ.
ನಗೆಮೊಗದರಸ, ಅವಧಾರು,
ಕೂಡಲಸಂಗಮದೇವಾ, ಬಗಿದು ಹೊಗುವೆನು ನಾ ನಿಮ್ಮ ಮನವನು.

– ಬ.ವ.ದೀ. 485

ಹರಿಹರ ಮಹಾಕವಿ ಸಾಧಕ ಜೀವಿ ಬಸವಣ್ಣನವರು ಸಂಗಮೇಶ್ವರನನ್ನು ಹೇಗೆ ಅರ್ಚಿಸುತ್ತಿದ್ದು ಎಂಬುದನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾನೆ. ಸ್ವತಃ ತಾನು ಹಂಪೆಯ ವಿರೂಪಾಕ್ಷನನ್ನು ಅರ್ಚಿಸುತ್ತಿದ್ದುದನ್ನೇ ಈ ರೀತಿ ಬರೆದಿರಬಹುದೆಂದು ಊಹಿಸಬಹುದು. ಸಾಧಕರು, ದಾರ್ಶನಿಕರು ಆದವರ ಮನಃಸ್ಥಿತಿಯನ್ನು ಅದೇ ರೀತಿ ಅನುಭವಿಸಿದವರು ಮಾತ್ರ ಚಿತ್ರಿಸಬಲ್ಲರು. ಬೌದ್ಧಿಕ ಪಟುತ್ವ ಮಾತ್ರ ಇರುವ ಯಾಂತ್ರಿಕ ಸಾಹಿತಿಗಳು (ಉದಾಃ ಡಾ|| ಚಿದಾನಂದ ಮೂರ್ತಿಯಂಥವರು) ದಾರ್ಶನಿಕ ಅನುಭವಗಳನ್ನು, ಸಾಧಕರ ಮನೋಗತಿಯನ್ನು ಅರ್ಥಮಾಡಿಕೊಳ್ಳಲೇ ಆರರು.

ಉಳಿದೆಲ್ಲ ಅರ್ಚಕರು ಪೂಜೆಯನ್ನು ಒಂದು ವೃತ್ತಿಯೆಂದು, ಉಪಜೀವನದ ಮಾರ್ಗವೆಂದು ಭಾವಿಸಿದರೆ ಬಸವಣ್ಣನವರಿಗೆ ಅದು ಜೀವಾಳ; ಉಳಿದವರು ಸಂಗಮೇಶ್ವರನ ಅರ್ಚನೆಯನ್ನು ಯಾಂತ್ರಿಕ ವಿಧಿಯಾಗಿ ಮಾಡಿದರೆ ಸಾಧಕ ಜೀವಿ ಬಸವಣ್ಣನವರು ತಮ್ಮನ್ನೇ ತಾವು ತೊಡಗಿಸಿಕೊಳ್ಳುವರು. ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆಯಲ್ಲಿ "ಕಾಯ ಸಂಗ ನಿಸ್ಸಂಗವಾಗಿ" ಎಂದಿದೆ. ಬಸವ ವಚನ ದೀಪ್ತಿಯಲ್ಲಿ ನಾನು ಒಂದಕ್ಷರ ಬದಲಾವಣೆ ಮಾಡಿ "ಕಾಮ ಸಂಗ ನಿಸ್ಸಂಗವಾಗಿ" ಎಂದು ಉಲ್ಲೇಖಿಸಿದ್ದೇನೆ. ಏಕೆಂದರೆ ಪರಮಾತ್ಮನ ಪ್ರೇಮ ಅಥವಾ ಅನುಗ್ರಹ ಹರಿದು ಬರಬೇಕಾದರೆ ಸಾಧಕನು ನಿಃಕಾಮಿಯಾಗಿದ್ದರೆ ಮಾತ್ರ ಸಾಧ್ಯ. ಆ ಸ್ಥಿತಿಯನ್ನು ಹೊಂದಿದ್ದೇನೆ, ಅನುಗ್ರಹಿಸು ಎಂದೇ ಬಸವಣ್ಣನವರು ಬೇಡಿಕೊಂಡಿರಬೇಕು. "ಕಾಯ ಸಂಗ ನಿಸ್ಸಂಗವಾಗಿ" ಎಂಬ ಪಾಠಾಂತರದ ಅರ್ಥವನ್ನು ಹೀಗೆ ಊಹಿಸಬಹುದು.

"ನನಗೆ ಸ್ನೇಹಿತರು ಯಾರೂ ಇಲ್ಲ; ಕಾಯ ಸಂಗ ನಿಸ್ಸಂಗವಾಗಿದೆ. ಯಾರೊಡನೆಯೂ ಬೆರೆಯ ಬೇಕೆಂಬ ಆಕಾಂಕ್ಷೆ ನನಗಿಲ್ಲ. ನಿನಗೆ ನಾನು ಒಲಿದಿರುವ ಕಾರಣ ನಿನ್ನನ್ನು ಬಿಟ್ಟು ಅಗಲಲಾರೆನು. ನಗೆ ಮೊಗದ ನನ್ನ ದೊರೆಯೆ, ನನ್ನ ಮಾತನ್ನು ಕೇಳಿಸಿಕೊ. ಕೂಡಲ ಸಂಗಮದೇವ, ನಿನ್ನ ಮನವನ್ನು ಬಗಿದು ಒಳನುಗ್ಗುವ ಹಂಬಲ ನನ್ನದು." ಇದು ಸಾಕ್ಷಾತ್ಕಾರಕ್ಕೆ ಮೊದಲು, ಸಂಗಮೇಶ್ವರನ ಅರ್ಚಕರಾಗಿದ್ದಾಗ ಬರೆದ ವಚನ ಎನ್ನುವುದಕ್ಕೆ "ನಗೆ ಮೊಗದರಸ" ಎಂಬ ಪದವೇ ಸಾಕ್ಷಿ. ಹರಿಹರ ಬರೆಯುತ್ತಾನೆ, ಸಂಗಮೇಶ್ವರ ಲಿಂಗದಿಂದ ದೂರವಿರಲು ಎಳ್ಳಷ್ಟು ಮನವಿಲ್ಲದ ಬಸವರಸರು ಆ ಲಿಂಗವನ್ನೇ ದಿಟ್ಟಿಸಿ ನೋಡುತ್ತ ದೇವಾಲಯದ ಒಳಗೇ ಮಲಗಿ ನಿದ್ರಿಸುತ್ತಾರೆ. ಪೂಜೆ ಮಾಡುವಾಗ ಹೂವುಗಳನ್ನು ಇಟ್ಟು ಅಲಂಕರಿಸಿ, ಆನಂದಿಸಿ, ನಂತರ ಈ ಹೂವು ಸಂಗಮೇಶ್ವರನಿಗೆ ಅಡ್ಡವಾಗುತ್ತವೆ ಎಂದು ಅವನ್ನು ಸರಿಸಿ, ಪುನಃ ದಿಟ್ಟಿಸುತ್ತಾರೆ. ಸಾಧಕ ಜೀವಿಗಳ ಈ ಹಂತ ಬಹಳ ಅಮೂಲ್ಯವಾದುದು.

488. ಉಲ್ಲಸಿತ ಮನ

ನೋಡಿ ನೋಡಿ ಲಿಂಗಧ್ಯಾನವೆನ್ನ ಮನ
ರಾಗರಂಜನೆಯ ಉತ್ಪತ್ತಿ ಸ್ಥಿತಿ ಲಯ ನಿನಗೆಂದಾದವು
ರಾಗರಂಜನೆಯ ಪೂಜೆ ಎನ್ನ ಮನ,
ಲಿಂಗದೇವ, ಆಹಾ, ಎನ್ನ ಮನ.

– ಬ.ವ.ದೀ. 486

ದೃಷ್ಟಿಯೋಗವನ್ನು ಮಾಡುತ್ತ ಕಣ್ಣುಗಳು ನೋಡುತ್ತಲಿದ್ದರೆ ಮನಸ್ಸು ಲಿಂಗಧ್ಯಾನದಲ್ಲಿ ತಲ್ಲೀನವಾಗುತ್ತಿದೆ. ಸಂಗೀತ ವಿದ್ಯೆಯ ಉತ್ಪತ್ತಿ ಸ್ಥಿತಿ ಲಯ ಆದುದೇ ನಿನಗಾಗಿ ದೇವಾ, ನಿನ್ನನ್ನು ಸ್ತುತಿಸಲೆಂದೇ ನಾದಯೋಗವಾದ ಸಂಗೀತವು ಹುಟ್ಟಿದೆ. ನಿನ್ನ ಪೂಜೆಯು ಮನಸ್ಸಿಗೆ ರಾಜರಂಜನೆಯನ್ನು ಒದಗಿಸುತ್ತದೆ. ಕಣ್ತುಂಬಿ ನೋಡುತ್ತಾ, ಭಾವ ತುಂಬಿ ಹಾಡುತ್ತ, ನಿನ್ನನ್ನು ಪೂಜಿಸುತ್ತಾ ಲಿಂಗದೇವಾ, ಎನ್ನ ಮನ ಉಲ್ಲಾಸದಿಂದ ಕುಣಿದಾಡುತ್ತದೆ.

489. ತನ್ಮಯತೆ

ವಾರವೆಂದರಿಯೆ, ದಿನವೆಂದರಿಯೆ
ಏನೆಂದರಿಯೆನಯ್ಯಾ;
ಇರುಳೆಂದರಿಯೆ, ಹಗಲೆಂದರಿಯೆ,
ಏನೆಂದರಿಯೆನಯ್ಯಾ;
ನಿಮ್ಮುವ ಪೂಜಿಸಿ ಎನ್ನುವ ಮರೆದೆ, ಲಿಂಗದೇವಾ – ಬ.ವ.ದೀ. 487

ಒಂದೊಂದು ದೇವತೆಯ ಹೆಸರಿನಲ್ಲಿ ಒಂದೊಂದು ವಾರ, ಒಂದೊಂದು ದಿನ ಮಾಡುವ ಯಾಂತ್ರಿಕ ಪೂಜೆಯಲ್ಲ ಇಷ್ಟಲಿಂಗ ಪೂಜೆ. ಯಾವ ವಾರ, ಯಾವ ದಿನ, ಯಾವ ಮುಹೂರ್ತ ಎಂದು ನೋಡದೆ ತನ್ಮಯತೆಯಿಂದ ಪೂಜಿಸುವ ನನಗೆ ಅವುಗಳ ಅರಿವಿಲ್ಲ. ಇಷ್ಟ ಬಂದಾಗ, ಭಾವ ತುಂಬಿದಾಗ ಪೂಜಿಸುವ ನನಗೆ ಹಗಲೆಂದೇನೂ ಇಲ್ಲ, ಇರುಳೆಂದೇನೂ ಇಲ್ಲ. ಯಾವಾಗ ನಿನ್ನನ್ನು ದರ್ಶಿಸಬೇಕು. ಆನಂದಿಸಬೇಕು ಎನ್ನಿಸುವುದೋ ಆಗ ನಾನು ಪೂಜಿಸುತ್ತೇನೆ. ಲಿಂಗದೇವಾ, ನಿಮ್ಮನ್ನು ಪೂಜಿಸುತ್ತಲೇ ನನ್ನನ್ನು ನಾನು ಮರೆಯುತ್ತ, ತನ್ಮಯತೆ ನನ್ನನ್ನು ಆವರಿಸಿಕೊಂಡು ಬಿಡುತ್ತದೆ.

490. ಪುಳಕಿತ ಚೇತನ

ನಿಮ್ಮ ನೋಟವನಂತ ಸುಖ, ನಿಮ್ಮ ಕೂಟ ಪರಮ ಸುಖ
ಅನಂತ ಕೋಟಿ ರೋಮಂಗಳು ಕಂಗಳಾಗಿ ನೋಡುತ್ತಿದ್ದೇನಯ್ಯಾ.
ಲಿಂಗದೇವಯ್ಯ, ನಿಮ್ಮ ನೋಡಿ ನೋಡಿ
ಮನದಲ್ಲಿ ರತಿ ಹುಟ್ಟಿ ನಿಮಿರ್ದವೆನ್ನ ಕಂಗಳು. – ಬ.ವ.ದೀ. 488

ಇಷ್ಟಲಿಂಗ ಯೋಗವು ನಿಂತಿರುವುದು ತ್ರಾಟಕದ ಮೇಲೆ. ತ್ರಾಟಕ ಯೋಗ ಅಥವಾ ದೃಷ್ಟಿಯೋಗದಲ್ಲಿ ಮೂರು ಬಗೆ ಅಂತರ್ ತ್ರಾಟಕ, ಮಧ್ಯ ತ್ರಾಟಕ ಮತ್ತು ಬಹಿರ್ ತ್ರಾಟಕ ಎಂಬುದಾಗಿ. ಪೂರ್ತಿ ಹೊರಗಿನ ವಸ್ತುಗಳಾದ ಚಂದ್ರ, ನಕ್ಷತ್ರ ಮುಂತಾದವನ್ನು ದಿಟ್ಟಿಸುವುದು ಬಹಿರ್ ತ್ರಾಟಕ, ಕಣ್ಣುಗಳನ್ನು ಪೂರ್ತಿಯಾಗಿ ಮುಚ್ಚಿ ಅವನ್ನು ಹೃದಯ ಕಮಲ ಅಥವಾ ಭ್ರೂಮಧ್ಯದಲ್ಲಿ ನಿಲ್ಲಿಸುವುದು ಅಂತರ್ ತ್ರಾಟಕ. ನಮ್ಮ ಮೂಗಿನಿಂದ 12 ಅಂಗುಲ ದೂರದಲ್ಲಿ ಅಂಗೈಯಲ್ಲಿ ಇರಿಸಿಕೊಂಡು ಇಷ್ಟಲಿಂಗವನ್ನು ದಿಟ್ಟಿಸುವುದು ಮಧ್ಯ ತ್ರಾಟಕ.

ಇಷ್ಟಲಿಂಗದ ಮೇಲೆ ದೃಷ್ಟಿ ನಿಲ್ಲಿಸಿ ಪ್ರೀತಿಯಿಂದ ನೋಡುವುದು ಅನಂತ ಸುಖ (Infinite Bliss)ವನ್ನು ನೀಡಿದರೆ ಇದರ ಮೂಲಕ ಪಡೆಯುವ ಲಿಂಗಾಂಗ ಸಾಮರಸ್ಯವು ಪರಮ ಸುಖವನ್ನು ನೀಡುತ್ತದೆ. ಪ್ರತಿಯೊಂದು ಕೂದಲು ಸಹ ನೆಟ್ಟಗೆ ನಿಂತು, ಸರ್ವಾಂಗವೂ ಕಣ್ಣಾಗಿ ನಾನು ದಿಟ್ಟಿಸುತ್ತಿದ್ದೇನೆ. ಲಿಂಗದೇವಾ, ನಿಮ್ಮನ್ನು ನೋಡುತ್ತಾ ಹೋದಂತೆ ಮನಸ್ಸಿನಲ್ಲಿ ನಿನ್ನ ಕುರಿತು ಉತ್ಕಟ ಪ್ರೇಮವು ಉಕ್ಕಿ, ಇಡೀ ಶರೀರವೇ ಪುಳಕಗೊಂಡು ನಿಮಿರುತ್ತದೆ.

491. ಚರಣ ಕಮಲದ ತುಂಬಿ

ವಚನದಲ್ಲಿ ನಾಮಾಮೃತ ತುಂಬಿ
ನಯನದಲ್ಲಿ ನಿಮ್ಮ ಮೂರುತಿ ತುಂಬಿ
ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ
ಮನದಲ್ಲಿ ನಿಮ್ಮ ನೆನಹು ತುಂಬಿ, ಲಿಂಗದೇವಾ,
ನಿಮ್ಮ ಚರಣ ಕಮಲದೊಳಗಾನು ತುಂಬಿ — - ಬ.ವ.ದೀ. 489

ತುಂಬಾ ಜನಪ್ರಿಯವಾದ ವಚನಗಳಲ್ಲಿ ಇದೂ ಒಂದು. ಒಬ್ಬ ಪೂಜಕನು ಏರಬಹುದಾದ ಉನ್ನತ ಅನುಭಾವಿಕ ಸ್ಥಿತಿಯನ್ನು ಇದು ಚಿತ್ರಿಸುತ್ತದೆ. ನಾಲಿಗೆಯಲ್ಲಿ ಲಿಂಗದೇವನ ನಾಮಾಮೃತವನ್ನು ಗುರು ಬಸವಣ್ಣನವರು ತುಂಬುತ್ತಾ ಹೋಗುತ್ತಾರೆ. ನಯನದಲ್ಲಿ ತುಂಬಿಕೊಳ್ಳುವಂತೆ ಇಷ್ಟಲಿಂಗವನ್ನು ದಿಟ್ಟಿಸಿ ನೋಡುತ್ತಾರೆ, ಕಿವಿಯಲ್ಲಿ ದೇವನ ಕೀರ್ತಿಯು ಮಾತ್ರ ತುಂಬಿಕೊಳ್ಳುವಂತೆ ಹಾಡುತ್ತಾರೆ. ಮನಸ್ಸಿನಲ್ಲಿ ದೇವನ ನೆನಹಿನ ಹೊರತು ಬೇರೇನೂ ಇಲ್ಲದಂತೆ ನೋಡಿಕೊಳ್ಳುತ್ತಾರೆ. ಆಗ ಅವರ ಚಿತ್ತವು ಲಿಂಗದೇವನ ಚರಣ ಕಮಲದಲ್ಲಿ ತುಂಬಿಯಾಗುತ್ತದೆ. ಬಹಿರ್ ಜಗತ್ತಿನ ಪರಿವೆಯನ್ನೇ ಕಳೆದು ಕೊಳ್ಳುತ್ತದೆ. ಕಮಲದ ಹೂವು ಅರಳಿರುವಾಗ ತುಂಬಿಯು ಮಕರಂದವನ್ನು ಪಾನ ಮಾಡುತ್ತಾ, ಮಾಡುತ್ತಾ ಕಳೆ ಏರುತ್ತದೆ. ಆಗ ಸೂರ್ಯಾಸ್ತವಾಗುತ್ತದೆ, ಕಮಲದ ಹೂವಿನ ದಳಗಳು ಮುಚ್ಚಿ ಕೊಳ್ಳುತ್ತವೆ. ತುಂಬಿಯು ದಿಗ್ಬಂಧನಕ್ಕೆ ಒಳಗಾಗುತ್ತದೆ. ಅದು ಬಲವಂತದ ಬಂಧನವಲ್ಲ; ಸ್ವಯಂ ಪ್ರೇರಣೆಯ ಪ್ರೇಮ ಬಂಧನ. ಅದೇ ರೀತಿ ಭಕ್ತನ ಹೃನ್ಮನಗಳು ಸಹ ದೇವನ ಚರಣ ಕಮಲದಲ್ಲಿ ಬಂಧಿ ಯಾಗುತ್ತವೆ.

492. ನೆರೆವ ಭರ

ಅಡಿಗಡಿಗೆ ಲಿಂಗವನಡರಿಯಡರಿ ನೋಡಿ ನೋಡಿ
ಕಂಗಳು ಕಡೆಗೋಡಿವರಿದುವೆನಗಯ್ಯಾ ಎನ್ನ ಅಶ್ರು ಜಲಂಗಳು
ಆಲಿಕಲ್ಲ ರೂಹಿನಂತೆ, ಅರಗಿನ ಪುತ್ಥಳಿಯಂತೆ
ತನು ಪುಳಕಿತವಾದ ಬೆಮರಬಿಂದುಗಳೆಲ್ಲಾ!
ಲಿಂಗದೇವನ ದರ್ಶನ ಸ್ಪರ್ಶನದಿಂದ ಮನವೊಲಿದು
ನೆರೆವ ಭರವನೇನ ಹೇಳುವೆನಯ್ಯಾ! — - ಬ.ವ.ದೀ. 490

ಅಡಿಗಡಿಗೆ ಅಂದರೆ ಪುನಃ ಪುನಃ ಲಿಂಗದೇವನನ್ನು ಅಂದರೆ ಇಷ್ಟಲಿಂಗವನ್ನು ಅಡರಿಯಡರಿ ನೋಡಿ (ಅಡರಿ ನೋಡು ಎಂದರೆ ತುದಿಗಾಲನ್ನು ಎತ್ತಿ ಎತ್ತಿ ನೋಡುವುದು ಎಂಬ ಪ್ರಯೋಗ ಸದ್ಯ ರೂಢಿಯಲ್ಲಿದೆ) ಅಂದರೆ ಕಣ್ಣಿನ ದೃಷ್ಟಿಯನ್ನು ನೆಟ್ಟು ನೋಡುತ್ತ, ಕಣ್ಣುಗಳ ತುದಿಯಲ್ಲಿ ನೀರಿನ ಹನಿಗಳು ಒಸರಿದವು. ಆ ಅಶ್ರುಜಲಂಗಳು ದುಃಖದ ಕಣ್ಣೀರಾಗಿರದೆ ಆನಂದದ ಹನಿಗಳು ಆಗಿವೆ. ಆಗ ಗುರು ಬಸವಣ್ಣನವರು ಆಲಿಕಲ್ಲ ರೂಹಿನಂತೆ, ಅರಗಿನ ಪುತ್ಥಳಿಯಂತೆ ದಿವ್ಯಾನುಭವದ ಆನಂದದಲ್ಲಿ ಕರಗಿ ಹೋಗುತ್ತಿದ್ದಾರೆ. ಶರೀರವು ಪುಳಕಗೊಳ್ಳುತ್ತದೆ. ಜೊತೆಗೆ ಮೈಯಲ್ಲಾ ಬಿಸಿಯಾಗಿ ಬೆವರಿನ ಹನಿಗಳು ಶರೀರದಿಂದ ಹೊರಬಂದು ಆವರಿಸಿಕೊಳ್ಳುತ್ತಿವೆ. ಆಗ ಬೆಳಕಿನ ರೂಪದಲ್ಲಿ ಲಿಂಗದೇವನ ದರ್ಶನವಾಗುತ್ತದೆ, ಆ ಬೆಳಕು ಗುರು ಬಸವಣ್ಣನವರನ್ನು ಸ್ಪರ್ಶಿಸುತ್ತಲೇ ಶರೀರ ಪ್ರಜ್ಞೆಯಳಿದು ಮನಸ್ಸು ದೇವನಲ್ಲಿ ಲೀಯವಾಗಿ ಜ್ಞಾತೃ-ಜ್ಞೇಯ-ಜ್ಞಾನ ಎಂಬ ತ್ರಿಪುಟಿಯಳಿದ ಅಮೂಲ್ಯ ಸ್ಥಿತಿ ಪ್ರಾಪ್ತವಾಗುತ್ತದೆ. ಇದರ ಸಂಭ್ರಮ ಮಾತಿಗೆ ನಿಲುಕದ್ದು ಹೇಗೆ ಇದನ್ನು ವರ್ಣಿಸಲಿ ಎನ್ನುತ್ತಾರೆ ಗುರು ಬಸವಣ್ಣನವರು.

(ಮುಂದುವರಿಯುತ್ತದೆ.)

ಗುರು ಪಥದಲ್ಲಿ ಸಂದ
ಪೂಜ್ಯ ಶ್ರೀ ಗಂಗಾ ಮಾತಾಜಿ

- ಮಾತೆ ಕಸ್ತೂರಿದೇವಿ

ಸತ್ಯವೆಂಬ ಸಮತೆಯ, ನೆಲೆಗೊಂಡ ಶಿಶುವಿಂಗೆ
ಅಂಗತತ್ ಪೃಥ್ವಿಯಂ ತೊಟ್ಟಿಲಿಟ್ಟು ।
ಮಿಥ್ಯವಳಿದರಿವೆಯ ಹಾಸಿ ಮಲಗಿಸಿದನು
ಭಕ್ತ ಬಸವಣ್ಣನೈ ಯೋಗಿನಾಥ ॥

- ಬಸವಯೋಗಿ ಶ್ರೀ ಸಿದ್ಧರಾಮೇಶ್ವರ

ಸತ್ಯ -ಸದಾಚಾರಗಳನ್ನು ನಿಸ್ಸಂಶಯವಾಗಿ ಸದೃಢವಾಗಿ ತನ್ನಲ್ಲಿ ಅಡಗಿಸಿಕೊಂಡಿದ್ದ ಚೇತನವೊಂದು ಜನ್ಮ ತಾಳಿದೆ. ಭವಿಷ್ಯದಲ್ಲಿ ಘಟಿಸಲಿರುವ ತಮ್ಮ ಮಹಾ ಕಾರ್ಯಗಳ ಸಾಧನೆಗೆ ಅನುವಾಗುತ್ತದೆ ಎಂಬ ಕಾರಣದಿಂದ ಮಾತೃಹೃದಯಿ ಗುರು ಬಸವಣ್ಣನವರು ಆ ಶಿಶುವನ್ನು ತೆಗೆದುಕೊಂಡು ಪೃಥ್ವಿಯೆಂಬ ತೊಟ್ಟಿಲಲ್ಲಿ ಅಜ್ಞಾನ, ಮಾಯೆ, ಮಿಥ್ಯೆ ಎಂಬ ಮಲಿನವಿಲ್ಲದ ಶುದ್ಧವಾದ ಅರಿವೆ (ವಸ್ತ್ರ)ಯನ್ನು ಹಾಸಿ ಮಲಗಿಸಿ ರಕ್ಷಣೆ ಒದಗಿಸಿದರು ಎಂದು ಬಸವ ಯೋಗಿ ಶ್ರೀ ಸಿದ್ಧರಾಮೇಶ್ವರರು ತಮ್ಮ ಗುರುಸ್ತುತಿಯಲ್ಲಿ ಬಣ್ಣಿಸಿದ್ದಾರೆ.

ಶ್ರೀ ಸಿದ್ಧರಾಮೇಶ್ವರರ ಸ್ತುತಿಯಲ್ಲಿರುವ ದಿವ್ಯವಾದ ಉಪಮೆಯನ್ನು ಅವಲೋಕಿಸಿದಾಗ ನಮಗೆ ತಿಳಿದು ಬರುವುದಿಷ್ಟು; ಲಿಂಗಾಯತ ಧರ್ಮದ ಇತಿಹಾಸದಲ್ಲಿ ಇಂಥ ಅಸಂಖ್ಯೆ ಚೇತನಗಳು ಉದಿಸಿ, ಇಹ ಪರ ಕಲ್ಯಾಣಕ್ಕಾಗಿ ಬದುಕಿ ಮುಂದಿನ ಜನಾಂಗಕ್ಕೂ ದಾರಿದೀಪವಾಗಿರುವುದು ನಿತ್ಯ ಸತ್ಯವಾಗಿದೆ. ಅದರಂತೆ ನಮ್ಮೆಲ್ಲರ ಸಮಕಾಲೀನರೂ, ಆತ್ಮೀಯರೂ, ಮಾರ್ಗದರ್ಶಕರೂ ಆಗಿರುವ ಪೂಜ್ಯ ಶ್ರೀ ಗಂಗಾ ಮಾತಾಜಿಯವರು ಈ ಗುಂಪಿಗೆ ಸೇರುತ್ತಾರೆ ಎಂದರೆ ಅತಿಶಯೋಕ್ತಿಯಲ್ಲ!

ಗುರು ಶಿಷ್ಯರ ಪವಿತ್ರ, ಪರಿಶುದ್ಧ ಪರಂಪರೆಯನ್ನು ಎತ್ತಿ ತೋರಿಸಿದ್ದು ಮಾತ್ರವಲ್ಲ, ತಮ್ಮ ವರ್ತನೋಪದೇಶದಿಂದ ಮಾದರಿಯಾಗಿ ನಮ್ಮ ಕಣ್ಣಮುಂದೆ ನಿಂತಿರುವ ಗುರುತ್ರಯರೆಂದರೆ ಪ್ರವಚನ ಪಿತಾಮಹರೆನಿಸಿದ ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಸ್ವಾಮೀಜಿಯವರು, ಪ್ರಪ್ರಥಮ ಮಹಿಳಾ ಜಗದ್ಗುರುಗಳಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ತಾಯಿಯವರು ಮತ್ತು ಇವರ ಅಧ್ಯಾತ್ಮ ಕಂದರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು. ಇಂಥ ಗುರು ಶಿಷ್ಯರ ಸದ್ವಿಧ-ಸಚ್ಚಾರಿತ್ರ್ಯ- ಅನನ್ಯ ಸಂಬಂಧಕ್ಕೆ ಕಿರೀಟ ಪ್ರಾಯವೆನಿಸಿದ ಕೆಲವು ಅನುಭಾವಿಗಳ -ದಾರ್ಶನಿಕರ ನುಡಿಮುತ್ತುಗಳನ್ನು ಈಗ ನೋಡೋಣ.

ಪೂಜ್ಯ ಶ್ರೀ ಲಿಂಗಾನಂದ ಅಪ್ಪಾಜಿಯವರು ಗುರು -ಶಿಷ್ಯರ ಬಾಂಧವ್ಯವನ್ನು ಶಿಲ್ಪ ಮತ್ತು ಶಿಲ್ಪಿಗೆ ಹೋಲಿಸಿ, ಶಿಷ್ಯರ ವ್ಯಕ್ತಿತ್ವವನ್ನು ಈ ರೀತಿ ಚಿತ್ರಿಸುತ್ತಾರೆ.

ಗುರುವೆಂಬ ಶಿಲ್ಪಿಯು ಶಿಷ್ಯನೆಂಬ ಶಿಲೆಯಲ್ಲಿರುವ ಪ್ರತಿಭೆಯನ್ನು ಗುರುತಿಸಿ, ತನ್ನ ಆದರ್ಶಕ್ಕೆ ತಕ್ಕಂತೆ ರೂಪುರೇಷೆ ಹಾಕಿಕೊಂಡು, ಅದು ಪ್ರಕಟಗೊಳ್ಳುವಂತೆ ಸಂಸ್ಕರಿಸುತ್ತಾ ಹೋಗುವನು. ಹೀಗೆ ಸಂಸ್ಕರಿಸುವ ಕಾರ್ಯದಲ್ಲಿ ಆಯ್ಕೆಗೊಳ್ಳುವ ಕಲ್ಲುಗಳನ್ನು ನಾಲ್ಕು ವಿಧವಾಗಿ ಗುರುತಿಸಬಹುದು. ಅವು ಹಿಟ್ಟುಗಲ್ಲು, ಕಠಿಣ ಶಿಲೆ, ಹಿಮಗಲ್ಲು ಮತ್ತು ಮೃದು ಶಿಲೆ ಎಂಬುದಾಗಿ. ಇವುಗಳಲ್ಲಿ ಹಿಟ್ಟುಗಲ್ಲಿನಂಥ ಶಿಲೆಗಳು ಕಟೆಸಿಕೊಳ್ಳಲು ಅಸಮರ್ಥವಾಗಿ ಪುಡಿ ಪುಡಿಯಾಗುತ್ತವೆ. ಮಾತ್ರವಲ್ಲ ಕಟೆಯುವವರು ಕಲ್ಲಿನ ಚೂರುಗಳು ಕಣ್ಣು ಬಾಯಿಗೆ ಸಿಡಿದು ತೊಂದರೆ ಅನುಭವಿಸುವುದು ತಪ್ಪುವುದಿಲ್ಲ. ದುರ್ಬಲ ಮನಸಿನ, ಚಂಚಲ ಸ್ವಭಾವದ ಶಿಷ್ಯರು ಈ ಗುಂಪಿಗೆ ಸೇರುತ್ತಾರೆ. ಕಠಿಣ ಶಿಲೆಯಾದರೆ ಗುರು

ನಿರೀಕ್ಷಿಸಿದಷ್ಟು ಸುಂದರ ಮೂರ್ತಿ ಆಗದಿದ್ದರೂ ಚಿಂತೆಯಿಲ್ಲ, ಮೊದ್ದು ಮೊದ್ದಾದ ಉರುಟು ಮೂರ್ತಿಯಾಗುತ್ತದೆ. ಪರಿಪೂರ್ಣ ಅಲ್ಲದಿದ್ದರೂ ಪರವಾಗಿಲ್ಲ ಎಂಬಷ್ಟು ಶಿಷ್ಯ ತಯಾರಾಗುತ್ತಾನೆ. ಕೆಲವೊಮ್ಮೆ ಮೇಲ್ನೋಟಕ್ಕೆ ಅಮೃತ ಶಿಲೆಯಂತೆ ಭಾಸವಾಗುವ ಹಿಮಗಲ್ಲಿನಲ್ಲಿ ಕಟೆದ ಮೂರ್ತಿಗಳು. ಬಿಸಿಲಿನ ಝಳಕ್ಕೆ ಹಿಮ ಕರಗುವಂತೆ ಸಾಧನೆಯ ಆರಂಭದಲ್ಲಿ ಎದುರಾಗುವ ವಿಪತ್ತುಗಳಿಗೆ, ಆರೋಪಗಳಿಗೆ ಹೆದರಿ ಹಿಮ್ಮೆಟ್ಟುತ್ತಾರೆ. ಹೇಡಿ, ಪುಕ್ಕಲು ಸ್ವಭಾವದ ಶಿಷ್ಯರು ಈ ಗುಂಪಿಗೆ ಸೇರುತ್ತಾರೆ. ಇಂಥವರು ಭವಿಷ್ಯದಲ್ಲಿ ಸಮಾಜದ ಮುಂದೆ ತಮ್ಮ ಅಸ್ತಿತ್ವವನ್ನು ಸಂಪೂರ್ಣ ವಾಗಿ ಕಳೆದುಕೊಳ್ಳುತ್ತಾರೆ.

ಇನ್ನು ಕೊನೆಯದಾದ ಮೃದು ಶಿಲೆಯನ್ನು ಕಟೆಯುವ ಶಿಲ್ಪಿಯದು ಮಹಾಭಾಗ್ಯ ಎಂದೇ ಹೇಳಬೇಕು. ಏಕೆಂದರೆ ಗುರುವಿನ ಸಂಕಲ್ಪಕ್ಕೆ ತಕ್ಕಂತೆ ಮೂರ್ತಿ ವಿಧೇಯವಾಗಿ ರೂಪುಗೊಳ್ಳುತ್ತ ಹೋಗುತ್ತದೆ. ಅಂಥ ದಿವ್ಯ ಮೂರ್ತಿಯನ್ನು ಸಮಾಜದಲ್ಲಿ ಪ್ರತಿಷ್ಠಾಪಿಸಿದ ಗುರು ಕೀರ್ತಿಗೆ ಪಾತ್ರನಾಗುತ್ತಾನೆ. ಇಲ್ಲಿ ಗುರುವಿನ ಕಟೆಯುವ ಪ್ರತಿಭೆ ಹೇಗೆ ಅತಿ ಮುಖ್ಯವೋ ಹಾಗೆಯೇ ಶಿಲೆಯಲ್ಲಿ (ಶಿಷ್ಯನಲ್ಲಿ) ಕಟೆಸಿಕೊಳ್ಳುವ ಸಹನೆ, ಶರಣಾಗತಿಯೊಂದಿಗೆ ಪರಿಪೂರ್ಣ ಮೂರ್ತಿಯಾಗ ಬೇಕೆಂಬ ಹಂಬಲವೂ ಅಷ್ಟೇ ಮುಖ್ಯ. ಇಲ್ಲವಾದರೆ ಗುರುವಿನ ನಿರಂತರ ಪ್ರಯತ್ನ ವ್ಯರ್ಥ ಪರಿಶ್ರಮವಾಗಿ ಪರಿಣಮಿಸುತ್ತದೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ತಮ್ಮ ಶಿಷ್ಯವೃತ್ತಿಯ ಅನುಭವವನ್ನು ಹೀಗೆ ಘೋಷಿಸುತ್ತಾರೆ. ''ಶಿಷ್ಯನಾಗಿ ಪಳಗಿದ ಹೊರತು ಗುರುಸಿದ್ಧಿಯಾಗುವುದಿಲ್ಲ; ಶಿಷ್ಯನಾದವನು ಎಂದಿಗೂ ಆದರ್ಶಗಳಿಂದ ದೂರ ಹೋಗಬಾರದು.''

ಮಹಾತ್ಮ ಗಾಂಧೀಜಿಯವರ ಮಾತಿನಲ್ಲಿ ಶಿಷ್ಯೋತ್ತಮನ ಪಾತ್ರವನ್ನು ನೋಡೋಣ. ''ಶಿಷ್ಯತ್ವ ಎಂಬುದು ಒಂದು ವೈಯಕ್ತಿಕ ಪವಿತ್ರ ವಿಷಯ. ಕಾರಣ ಶಿಷ್ಯನಾಗುವುದೆಂದರೆ ದ್ವಿತೀಯ ಜನ್ಮ ಪಡೆದಂತೆ. ಅದೊಂದು ಸಂಪೂರ್ಣ ಶರಣಾಗತಿ. ಉಳಿದ ಸಂಬಂಧಗಳಿಗಿಂತಲೂ ಗುರು ಶಿಷ್ಯರ ಅಧ್ಯಾತ್ಮಿಕ ಸಂಬಂಧ ಅತಿ ಶ್ರೇಷ್ಠ.

ಕ್ರಾಂತಿಕಾರಿ ಸಂತರೆಂದು ಹೆಸರಾಗಿರುವ ಜೈನಮುನಿ ತರುಣಸಾಗರ ಶ್ರೀಯವರ ನುಡಿ ಮುತ್ತಿನಲ್ಲಿ ಗುರು ಶಿಷ್ಯರು ಹೇಗೆ ಪ್ರಕಾಶಿಸುತ್ತಿದ್ದಾರೆ ನೋಡಿ ''ಗುರು ಯಾರನ್ನು ಸ್ಮರಿಸುತ್ತಾನೋ ಆತನೇ ಶಿಷ್ಯ; ಗುರು ಶಿಷ್ಯರು ಗುರುವಿನ 'ತನು' (ಸೇವೆ) ವಿನ ಬಗ್ಗೆ ಗಮನ ಇಡಬೇಕು. ಮತ್ತು ಗುರುವಾದವನು ಶಿಷ್ಯನ 'ಮನ' (ಮನೋ ವ್ಯಾಪಾರ) ದ ಬಗ್ಗೆ ಗಮನ ಇಡಬೇಕು ಎನ್ನಲಾಗಿದೆ.''

ಮೇಲಿನ ಸಮಾನ ಮನಸ್ಕರ ಅನುಭವಗಳನ್ನು ಮನನ ಮಾಡಿದಾಗ ಇಹಪರದ ಸಾಧನೆಗೆ ಪರಸ್ಪರ ಪೋಷಕರಾಗಿ ನಿಲ್ಲುವ ಗುರು ಶಿಷ್ಯರು ಆಯ್ಕೆಗೆ ಸಂಸ್ಕಾರ, ಸಂಕಲ್ಪಗಳ ಜತೆಗೆ ದೇವನ ಕರುಣೆಯ ಬಲವೂ ಬೇಕು ಎಂದೆನಿಸದೆ ಇರದು. ಏಕೆಂದರೆ ಗುರು ತೋರಿದ ದಾರಿಯಲ್ಲಿ ಏಕ ನಿಷ್ಠೆಯಿಂದ ಸಾಗುವ ಶಿಷ್ಯನದು ಒಂದು ತಪಸ್ಸು ಎಂದರೆ ತಪ್ಪಲ್ಲ. ಹೀಗಿರುವಾಗ ನಂಬಿ ಬಂದಿರುವ ಶಿಷ್ಯನಿಗೆ ಅವನ ಶಕ್ತಿ-ಸಾಮರ್ಥ್ಯಕ್ಕೆ ತಕ್ಕಂತೆ, ಕ್ರಮಿಸಲು ಸಾಧ್ಯವಾಗುವಂತಹ ದಾರಿಯನ್ನೇ ಗುರು ತೋರಿಸುತ್ತಾನೆ ಎಂಬುದು ನಿಸ್ಸಂದೇಹ. ಆದರೆ ಈ ದಾರಿಯಲ್ಲಿ ಗುರು ಲಿಂಗ ಜಂಗಮ ಬಲದಿಂದ ಸುರಕ್ಷಿತವಾಗಿ ಸಾಗಬೇಕಾದ ಹೆಚ್ಚಿನ ಹೊಣೆ ಶಿಷ್ಯನ ಮೇಲಿರುತ್ತದೆ ಎಂಬುದೂ ಅಷ್ಟೇ ಮುಖ್ಯ. ಲೌಕಿಕವೇ ಇರಲಿ ಪಾರಲೌಕಿಕವೇ ಇರಲಿ ಗುರಿ ಸಾಧನೆಗೆಂದು ಆಯ್ಕೆ ಮಾಡಿಕೊಳ್ಳುವ ಯಾವ ದಾರಿಗಳೂ ಸಂಪೂರ್ಣ ಸುರಕ್ಷಿತವಾಗಿ ಪ್ರಯಾಣ ಮಾಡಲಿಕ್ಕೆಂದೇ ರಸ್ತೆಗಳು ನಿರ್ಮಾಣವಾಗುತ್ತವೆ. ವಿಶಾಲವಾದ ಜೋಡಿರಸ್ತೆಗಳು ಎರಡು ಬದಿಯಲ್ಲಿ ಸಾಲು ಮರಗಳು, ವಿದ್ಯುತ್ ದೀಪಗಳು, ಮಾರ್ಗದರ್ಶಕ ಫಲಕಗಳು, ಒಳಚರಂಡಿ ವ್ಯವಸ್ಥೆ, ಪ್ರತ್ಯೇಕ ಕಾಲುದಾರಿ, ವಾಹನಗಳ ವೇಗವನ್ನು ನಿಯಂತ್ರಿಸಲು ಅಲ್ಲಲ್ಲಿ ಉಬ್ಬುಗಳು, ವಾಹನಗಳ ದಟ್ಟಣೆಯನ್ನು ನಿಯಂತ್ರಿಸಲು ಸಂಚಾರಿ ಪೋಲಿಸರು

ಹೀಗೆಲ್ಲ ವ್ಯವಸ್ಥೆಯಾಗಿರುತ್ತದೆ. ಮಾತ್ರವಲ್ಲ ಪಾದಚಾರಿಗಳಿಗೆ ರಸ್ತೆ ದಾಟಲು ಸುರಂಗ ಮಾರ್ಗ, ಜೀಬ್ರಾಲೈನು ಇರುತ್ತದೆ. ಚಾಲಕರು ಧೂಮಪಾನ, ಮದ್ಯಪಾನ, ಮೊಬೈಲ್ ಸಂಭಾಷಣೆ, ಹರಟೆ ಮುಂತಾದ ವರ್ತನೆಗಳಿಂದ ವಾಹನ ಚಾಲನೆ ಮಾಡುವುದನ್ನು ಕಾನೂನು ನಿಷೇಧಿಸುತ್ತದೆ. ಆಗಾಗ ಸಂಚಾರ ಸಪ್ತಾಹಗಳನ್ನು ಆಚರಿಸಿ ರಸ್ತೆ ನಿಯಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುತ್ತಾರೆ. ಇಷ್ಟೆಲ್ಲ ಎಚ್ಚರಿಕೆ ಮತ್ತು ಸುರಕ್ಷತಾ ಕ್ರಮಗಳನ್ನು ತೆಗೆದುಕೊಂಡಿದ್ದರೂ ಅಪಘಾತಗಳು ಸಂಭವಿಸುವುದಿಲ್ಲವೆ? ಸಾವು ನೋವು ಉಂಟಾಗುವುದಿಲ್ಲವೆ? ಇದನ್ನರಿತೇ ಜನರಿಗೂ, ಚಾಲಕರಿಗೂ ಎಚ್ಚರಿಕೆ ಕೊಡಲು ಅನೇಕ ರೀತಿಯ ಸೂಚನಾ ಫಲಕಗಳನ್ನು ರಸ್ತೆ ಬದಿಗಳಲ್ಲಿ ಹಾಕಿರುತ್ತಾರೆ. ಅವು ಹೀಗಿರುತ್ತವೆ. ಅಪಘಾತಗಳಲ್ಲಿ ಸತ್ತವರು, ಅನಾಥರಾದವರು, ಅಂಗಹೀನರಾದವರು, ಸಂಬಂಧಿಕರನ್ನು ಕಳೆದು ಕೊಂಡವರು, ಗಾಯಗೊಂಡವರು ಎಂದು ಅಂಕಿ ಅಂಶಗಳಲ್ಲಿ ತೋರಿಸುತ್ತಾರೆ. ಅದೇ ರೀತಿ ಸಾಧಕನು ನಡೆಯುವ ದಾರಿಯಲ್ಲಿ ಗುರು ಬಸವಣ್ಣನವರು ಹೀಗೊಂದು ಫಲಕವನ್ನು ನಮಗಾಗಿ ಹಾಕಿದ್ದಾರೆ. ನೋಡಿರಿ.

''ಗುರು ಪಥವ ಮೀರಿ ಮಾಡುವ
ನೇಮ ಸಲ್ಲವು ಸಲ್ಲವು............... ಎಂದು.

ವೈರಾಗ್ಯ ಚಕ್ರವರ್ತಿ ಅಲ್ಲಮಪ್ರಭುದೇವರು ಸಹ ತಮ್ಮ ಸೂಚನಾ ಫಲಕವನ್ನು ಹೀಗೆ ಹಾಕಿಸಿದ್ದಾರೆ.

''ಹೆಣ್ಣಿಗಾಗಿ ಸತ್ತವರು ಒಂದು ಕೋಟಿ
ಮಣ್ಣಿಗಾಗಿ ಸತ್ತವರು ಒಂದು ಕೋಟಿ
ಹೊನ್ನಿಗಾಗಿ ಸತ್ತವರು ಒಂದು ಕೋಟಿ''..... ಎಂದು.

ಸಾಧಕನನ್ನು ಎಚ್ಚರಿಸುವ ವಿಷಯದಲ್ಲಿ ಜಗನ್ಮಾತಾ ಅಕ್ಕಮಹಾದೇವಿಯವರು ಸಹ ತಮ್ಮ ಬೋರ್ಡನ್ನು ಹೀಗೆ ಹಾಕಿದ್ದಾರೆ.

''ಜಗದ ಜಂಗುಳಿಗೆ ಬೆಂಗೋಲನೆತ್ತಿ
ಕಾಡಿತ್ತು ಮಾಯೆ!''......... ಎಂದು.

ಸಾಧಕನು ಹೆಜ್ಜೆ ಹೆಜ್ಜೆಗೂ ಸಿಗುವ ಇಂಥ ಸೂಚನೆಗಳನ್ನು ಎಚ್ಚರಿಯಿಂದ ಗಮನಿಸುತ್ತಲೇ ಸಾಗಬೇಕು. ಏಕೆಂದರೆ ಗುರಿಯಷ್ಟೇ ಕ್ರಮಿಸಬೇಕಾದ ದಾರಿಯೂ ಮುಖ್ಯ. ಇದನ್ನೇ ಸ್ವಾಮಿ ವಿವೇಕಾನಂದರು ಹೀಗೆ ಹೇಳುವುದು, ''ಗುರಿಯನ್ನು ನಿರ್ಧರಿಸಿದ ಮೇಲೆ ಅದನ್ನು ತಲುಪುವ ದಾರಿಯ ಕಡೆಗೆ ಹೆಚ್ಚಿನ ಗಮನವನ್ನು ಕೊಡು. ಏಕೆಂದರೆ ದಾರಿ ಸರಿಯಿದ್ದರೆ ಅದು ತಾನಾಗಿಯೇ ಗುರಿಯೆಡೆಗೆ ಒಯ್ಯುತ್ತದೆ'' ಎಂದು. ರಾಮಕೃಷ್ಣ ಪರಮಹಂಸರು ಸಾಧಕರಿಗೆ ಹೇಳುವ ಕಿವಿಮಾತನ್ನು ನಾವು ಕೇಳಿಸಿಕೊಳ್ಳೋಣ. ''ಸಾಧಕರು ಕಾಮಿನಿ, ಕಾಂಚನ, ಕೀರ್ತಿಗಳಿಂದ ದೂರವಿರಬೇಕು'' ಎಂದು.

ಅನುಭವ ಮಂಟಪದ ಸ್ವಾಗತಕಾರರಾದ ಉಗ್ಘಡಿಸುವ ಕಾಯಕದ ಬಿಬ್ಬಿದೇವಯ್ಯನವರು ''ಸನ್ಮಾರ್ಗ, ಸತ್ಕ್ರಿಯಾವಂತರೇ ಬನ್ನಿ'' ಎಂದು ಸನ್ಮಾರ್ಗದಲ್ಲಿ ಸಾಗಬೇಕೆಂಬ ಛಲ ಹೊತ್ತಿರುವ ಶರಣರ ಬರವಿಗಾಗಿ ಹಾರೈಸುತ್ತಾರೆ.

ಸಾಧಕರನ್ನು ವಿಚಲಿತಗೊಳಿಸಲು, ದಿಕ್ಕು ತಪ್ಪಿಸಲು, ಭ್ರಮಾಧೀನರನ್ನಾಗಿ ಮಾಡಲು, ಆಂತರಿಕ ಸತ್ವವನ್ನು ಪರೀಕ್ಷಿಸಲು, ಸಾಕಷ್ಟು ವಿಪತ್ತುಗಳು, ಆಕರ್ಷಣೆಗಳು ಬೆದರಿಕೆಗಳು ಮಾರ್ಗ ಮಧ್ಯದಲ್ಲಿ ಎದುರಾಗುತ್ತವೆ. ಇಂಥ ಅವಘಡಗಳನ್ನು ಮೆಟ್ಟಿ ಯಶಸ್ವಿಯಾಗಿ ಮುಂದೆ ಸಾಗಲು ಪಥಿಕನಿಗೆ ಮುಖ್ಯವಾಗಿ ಬೇಕಾದುದು ಏನು?! ಮೊದಲು ತಾನು ಸರಿಯಾದ ದಾರಿಯಲ್ಲಿ ಸಾಗುತ್ತಿದ್ದೇನೆ ಎಂಬ ಬಗ್ಗೆ ದೃಢನಂಬಿಕೆ ಮತ್ತು ಗುರುವಿನಲ್ಲಿ ಶರಣಾಗತಿ ಇರಬೇಕು. ಇದನ್ನೇ ಪೂಜ್ಯ ಶ್ರೀ ಗಂಗಾ

ಮಾತಾಜಿಯವರು "ಗುರು ಬಸವಣ್ಣನವರು ಶರಣಾಗತ ರಕ್ಷಕ ವಜ್ರ ಪಂಜರ" ಎಂದು ನಮಗೆಲ್ಲ ಬೋಧಿಸುವುದು. ಇಂಥ ದಾರಿಯಲ್ಲಿ ಪೂಜ್ಯರ ಜೊತೆಗೆ ಸಹಪಥಿಕರಾಗಿ ಹೆಜ್ಜೆ ಹಾಕಲಾಗದೆ ಸೋತ ಅನೇಕ ಸಾಧಕರ ಪರಿಯನ್ನು ಈಗ ನೋಡೋಣ.

ಅತಿವೇಗದಿಂದ ಮುನ್ನುಗ್ಗಿ ಮುಗ್ಗರಿಸಿದವರು, ದಿಕ್ಕು ತಪ್ಪಿದವರು, ಸ್ವತಂತ್ರರಾಗ ಬಯಸಿದವರು. ಗುಂಪು ಕಟ್ಟಿ ಸಂಘಟನೆಯನ್ನು ಒಡೆಯಲು ಪ್ರಯತ್ನಿಸಿದ ಪ್ರತ್ಯೇಕತಾವಾದಿಗಳನ್ನು ಕಾಣಬಹುದು. ಈ ಹಾದಿಯಲ್ಲಿ ಭೇಟಿಯಾದ ಸ್ವೇಚ್ಛಾಗಮನಿಗಳಿಗೇನು ಕೊರತೆಯಿಲ್ಲ. ಇನ್ನು ಕೆಲವು ಸಾಧಕರು ತಾವು ವೈಯಕ್ತಿಕವಾಗಿ ಸಚ್ಚಾರಿತ್ರ್ಯವಂತರಿದ್ದರೂ ಸಾಮಾಜಿಕ ಶಿಷ್ಟಾಚಾರಗಳನ್ನು ಉಲ್ಲಂಘಿಸಿ, ಭಾವನಿಂದೆಗೆ ಹೆದರಿ ಹಿಮ್ಮೆಟ್ಟಿರುವುದು ಉಂಟು. ಅಪಕ್ವ ಮತಿಗಳೂ, ಅನುಭವಿಗಳೂ ಆದ ಸಾಧಕರು ಗುರುವಿನ ಮಾರ್ಗದರ್ಶನದಲ್ಲಿಯೇ ಸಂದೇಹ ತಾಳಿ ದೂರವಾದವರು ಇದ್ದಾರೆ. ಇನ್ನು ಕೆಲವರು ಸುಳಿದು ಜಂಗಮರೂ ಅಲ್ಲದ ನಿಂತು ಭಕ್ತರೂ ಆಗದ ಉಭಯಭ್ರಷ್ಟತೆಯನ್ನೇ ಗುರಿಯನ್ನಾಗಿ ಮಾಡಿಕೊಂಡು ತಿರುಗುವ ಅಲೆಮಾರಿಗಳು ಉಂಟು. ಪ್ರತಿಜ್ಞಾಬದ್ಧರಾಗಿ ಕಾಷಾಯ ವಸ್ತ್ರಗಳನ್ನು ಧರಿಸಿ, ನಂತರ ಅಷ್ಟೇ ಸುಲಭವಾಗಿ ತ್ಯಜಿಸಿದ ಅಪ್ರತಿಮ ವೀರರೂ ಕಾಣಸಿಗುತ್ತಾರೆ. ತಮ್ಮ ವೈಯಕ್ತಿಕ ಸೋಲುಗಳಿಗೆ, ಸ್ವಾರ್ಥಕ್ಕೆ ದೌರ್ಬಲ್ಯಗಳಿಗೆ ಗುರುಗಳು, ಸಾಧಕರು, ಭಕ್ತರು, ಸಂಸ್ಥೆಯೇ ಕಾರಣವೆಂದು ದೂರಿ ಹೊರ ನಡೆದವರ ಸಂಖ್ಯೆಗೂ ಮಿತಿಯಿಲ್ಲ. ಮಠ, ಪೀಠ, ಅಧಿಕಾರಗಳಿಗಾಗಿ ಹಂಬಲಿಸಿ, ಸಿಗದಿದ್ದಾಗ ಸಿಡಿದು ಹೊರ ನಡೆದವರಿದ್ದಾರೆ.

ತಮ್ಮ ಜೀವಿತಾವಧಿಯಲ್ಲಿ ಹಲವಾರು ಸಾಧಕರ ಜೀವನದ ಏಳುಬೀಳುಗಳನ್ನು ಗಮನಿಸುತ್ತಾ ಸಾಗಿದ ವಾಙ್ಮಯ ತಪಸ್ವಿ ಪೂಜ್ಯ ಶ್ರೀ ಲಿಂಗಾನಂದ ಅಪ್ಪಾಜಿಯವರು ಹೀಗೆ ಸಮರ್ಥಿಸುತ್ತಿದ್ದರು. "ವಿಶ್ವಕಲ್ಯಾಣ ಮಿಷನ್ ಒಂದು ಟ್ರೈನ್ ಇದ್ದಂತೆ. ನಾವು ಹತ್ತಲು ಬಂದವರಿಗೆಲ್ಲರಿಗೂ ದೀಕ್ಷೆ ಎಂಬ ಟಿಕೆಟ್ ಕೊಡುತ್ತೇವೆ. ಹತ್ತುವವರು ಹತ್ತಬಹುದು. ಇಳಿಯುವವರು ಇಳಿಯಬಹುದು. ಗುರಿ ತಲುಪುವವರು ತಲುಪಬಹುದು" ಎಂದು.

ನಮ್ಮೆಲ್ಲರ ನೆಚ್ಚಿನ ಗುರುಮಾತೆಯವರಾದ ಪೂಜ್ಯ ಮಾತಾಜಿಯವರು ಈ ಸಾಧನಾ ಪಥದಲ್ಲಿ ತಮ್ಮ ಯಶಸ್ಸನ್ನು ಬಿಂಬಿಸುವುದು ಹೀಗೆ: "ನಾನು ಮಾಡುತ್ತಿರುವುದು ರೈತನ ಕೆಲಸ. ಭೂಮಿಯಲ್ಲಿ ಬೀಜ ಬಿತ್ತಿದಂತೆ ನಾನು ಬಯಸಿದವರಿಗೆ ದೀಕ್ಷೆ ಕೊಡುತ್ತೇನೆ, ಅದರಲ್ಲಿ ಗಟ್ಟಿ ಕಾಳು ಉಳಿಯುತ್ತವೆ; ಜೊಳ್ಳು ಹಾರಿಹೋಗುತ್ತವೆ. ಇನ್ನೂ ಮುಂದುವರಿದು ತಮ್ಮ ಸದೃಢ ನಿಲುವನ್ನು ಹೀಗೆ ಸ್ಪಷ್ಟಪಡಿಸುತ್ತಾರೆ. "ನಾನು ರಾಷ್ಟ್ರ, ಸತ್ಯ, ಧರ್ಮ, ಸಮಾಜ, ಸಾಹಿತ್ಯಗಳ ರಕ್ಷಣೆಗಾಗಿ ಹೋರಾಟ ಮಾಡುತ್ತಾ ಮುಂದೆ ಸಾಗುತ್ತಿದ್ದೇನೆ. ಈ ಹೋರಾಟದಲ್ಲಿ ಸೋತು ಕೆಳಗೆ ಬಿದ್ದಿರುವ, ಹೆದರಿ ಹಿಮ್ಮೆಟ್ಟಿದವರ ಬಗ್ಗೆ ಯೋಚಿಸಲು ನನಗೆ ಸಮಯವಿಲ್ಲ. ಏಕೆಂದರೆ ನಾನು ಹೋರಾಟ ಮಾಡುತ್ತಾ ಮುಂದೆ ಸಾಗಬೇಕಾಗಿದೆ."

ಅಷ್ಟೆ ಅಲ್ಲ ಅಧ್ಯಾತ್ಮವೀರರಾದ ಸಾಧಕರಿಗೆ ಪೂಜ್ಯ ಮಾತಾಜಿಯವರು ಕೊಡುವ ಕರೆ ಹೀಗಿದೆ. "ಒಮ್ಮೆ ಪ್ರತಿಜ್ಞಾಬದ್ಧರಾಗಿ ಕಾಷಾಯ ವಸ್ತ್ರಗಳನ್ನು ಸ್ವೀಕರಿಸಿ ಧರಿಸಿದ ಮೇಲೆ ಚರ್ಮ ಸುಲಿದರೂ ಕಾವಿ ವಸ್ತ್ರಗಳನ್ನು ತ್ಯಜಿಸುವುದಿಲ್ಲ ಎಂಬ ಛಲ ಸಾಧಕರಿಗೆ ಇರಬೇಕು" ಎಂದು.

ಶರಣ ಬಂಧುಗಳೇ ನಿಮಗೊಂದು ವಿಷಯ ಗೊತಿದೆಯೇ? ಗೊತ್ತಿದ್ದರೆ ಹೇಳಿ; ಗೊತ್ತಿಲ್ಲದಿದ್ದರೆ ಕೇಳಿ. ಸ್ವಪ್ರತಿಷ್ಠೆ, ಸ್ವಕೀರ್ತಿ, ವೈಯಕ್ತಿಕ ಮುಕ್ತಿಗಾಗಿ ಬದುಕುತ್ತಿರುವ ಇಹಲೋಕ ವೀರರೆನಿಸಿದ ಸ್ವಾಮಿಗಳು, ಗುರುಗಳ, ಮಠಾಧೀಶರ ಶಿಷ್ಯರಾಗುವುದು ಬಹಳ ಸುಲಭ. ಏಕೆಂದರೆ ಇಂಥ ಗುರು

ಶಿಷ್ಯರು ಬದುಕುವುದು ಸುಖದ ಸುಪ್ಪತ್ತಿಗೆಯ ಮೇಲೆ. ಮಾತ್ರವಲ್ಲ ಇಂಥವರ ಗುರಿ ಸಾಧನೆ ತಮ್ಮದೇ ಆದ ಸೀಮಿತ ಪರಿಧಿಯೊಳಗೆ ಇರುತ್ತದೆ. ಆದರೆ ಇಹಪರ ಕಲ್ಯಾಣಕ್ಕಾಗಿ ತಮ್ಮ ತನು ಮನ ಧನ, ಪ್ರಾಣ ಅಭಿಮಾನಗಳನ್ನು ಪಣಕ್ಕಿಟ್ಟು, ಆದರ್ಶಗಳ ತಳಹದಿಯ ಮೇಲೆ ಬದುಕುತ್ತಿರುವ ಗುರುಗಳ ಶಿಷ್ಯರಾಗುವುದು ಕಷ್ಟಸಾಧ್ಯ. ಏಕೆಂದರೆ ಇವರು ತೆಗೆದುಕೊಳ್ಳುವ ಸುಧಾರಣಾತ್ಮಕ ಕ್ರಾಂತಿಕಾರಿ ನಿರ್ಧಾರಗಳಿಗೆ ನಂಬಿದ ಭಕ್ತರೂ, ಶಿಷ್ಯರೂ ಆತ್ಮಸ್ಥೈರ್ಯದೊಂದಿಗೆ ಪೋಷಕರಾಗಿ ನಿಂತಾಗ ಮಾತ್ರ ತತ್ವಗಳು ಸಮಾಜದಲ್ಲಿ ನೆಲೆಯೂರಲು ಸಾಧ್ಯ. ಆದ್ದರಿಂದ ಗುರುವಿನಷ್ಟೇ ಶಿಷ್ಯನು ಅಡ್ಡಿ ಆತಂಕಗಳಿಗೆ, ಮಾನ ಅಪಮಾನಗಳಿಗೆ ಹೆಗಲು ಕೊಡಬೇಕಾಗುತ್ತದೆ ಎಂಬುದು ಅನುಭವ ವೇದ್ಯ.

ಗುರು ತೋರಿದ ದಾರಿಯಲ್ಲಿ ಯಶಸ್ವಿಯಾಗಿ ಸಾಗುತ್ತಿರುವ ಪೂಜ್ಯ ಶ್ರೀ ಗಂಗಾಮಾತಾಜಿಯವರ ಅಚಲ ಶ್ರದ್ಧೆ - ನಂಬಿಕೆಗೆ ಪುಷ್ಟಿ ಒದಗಿಸುತ್ತಿರುವ ಮತ್ತು ಅವರಿಗೆ ಬಲು ಪ್ರಿಯವಾದ ದೃಷ್ಟಾಂತವನ್ನು ಈಗ ನೋಡೋಣ.

ಸತ್ಪಥದಲ್ಲಿ ಸಾಧನೆಗೈಯಬೇಕೆಂಬ ಸಂಕಲ್ಪದಿಂದ ಸಾಧಕನೋರ್ವ ಹೆಜ್ಜೆ ಹಾಕುತ್ತಿದ್ದಾನೆ. ಏಕಾಂಗಿಯಾಗಿಯೇ ಎದುರಾದ ಎಲ್ಲಾ ರೀತಿಯ ತಾಪತ್ರಯಗಳನ್ನು ಬಹು ಪ್ರಯಾಸದಿಂದಲೇ ಗೆಲ್ಲುತ್ತಾ ಮುಂದೆ ಸಾಗುತ್ತಿದ್ದಾನೆ. ದಾರಿ ತೋರಿಸುವ ಮತ್ತು ತಾನು ಹೋಗುತ್ತಿರುವ ದಾರಿ ಸರಿಯಾಗಿದೆ ಎಂದು ದೃಢಪಡಿಸುವ ಪಥದರ್ಶಕನಿಗಾಗಿ ಹಂಬಲಿಸಿ ಹುಡುಕುತ್ತಿದ್ದಾಗ ಅವನ ಮುಂದೆ ಎರಡು ಹೆಜ್ಜೆಗಳು ಪ್ರತ್ಯಕ್ಷವಾಗುತ್ತವೆ. ಅವನು ಗಟ್ಟಿಯಾಗಿ "ಯಾರು ಮುಂದೆ ಹೋಗುತ್ತಿರುವವರು?! ಎಂದು ಕೂಗಿ ಕೇಳುತ್ತಾನೆ." ಆಗ ಅಶರೀರವಾಣಿ ನುಡಿಯುತ್ತದೆ. "ಮಗು, ನಾನು ನಿನಗೆ ದಾರಿ ತೋರಿಸುತ್ತಾ ಮುಂದೆ ಸಾಗಿರುವೆ. ನೀನು ಈಗ ಹೋಗುತ್ತಿರುವ ದಾರಿ ಸವೆಸುತ್ತಿರುವಾಗ ಮುಂದಿನ ಹೆಜ್ಜೆಗಳೂ ಮಾಯವಾಗುತ್ತದೆ." ಮತ್ತೆ ಆ ಸಾಧಕ ಕೇಳುತ್ತಾನೆ. "ಎಲ್ಲಿ ನಿನ್ನ ಹೆಜ್ಜೆಗಳು ಕಾಣುತ್ತಿಲ್ಲ?!" ಆಗ ಅಶರೀರವಾಣಿ ಉಲಿಯುತ್ತದೆ. "ನೀನೊಬ್ಬನೆ ಸಾಗುತ್ತಿದೆ. ಆದ್ದರಿಂದ ನಿನ್ನ ಪಕ್ಕದಲ್ಲಿಯೇ ನಾನು ಬರುತ್ತಿರುವೆ. ಚಿಂತಿಸಬೇಡ. ಮುಂದೆ ಸಾಗು ಎನ್ನುತ್ತದೆ." ಪಕ್ಕದಲ್ಲಿ ನೋಡುತ್ತಾನೆ. ಹೆಜ್ಜೆಗಳು ಮೂಡುತ್ತವೆ. ಸಮಾಧಾನದಿಂದ ಪ್ರಯಾಣ ಬೆಳೆಸುತ್ತಾನೆ. ಪಕ್ಕದಲ್ಲಿ ಬರುತ್ತಿದ್ದ ಹೆಜ್ಜೆಗಳು ಕಾಲ ಕ್ರಮೇಣ ಅದೃಶ್ಯವಾಗುತ್ತವೆ. ಆತಂಕದಿಂದ ಸುತ್ತಮುತ್ತ ಹುಡುಕುತ್ತಾನೆ. ಆ ಧ್ವನಿ ಮತ್ತೆ ಕೇಳುತ್ತದೆ. ಮಗು, ಈಗ ನಿನ್ನ ಹಿಂದೆಯೇ ಬೆಂಗಾವಲಾಗಿ ಬರುತ್ತಿದ್ದೇನೆ. ಹೆದರಬೇಡ. ಮುಂದೆ ಹೋಗು ಎಂದಾಗ, ಹಿಂದುರುಗಿ ನೋಡುತ್ತಾನೆ. ಹೆಜ್ಜೆಗಳು ಅವನನ್ನು ಹಿಂಬಾಲಿಸುತ್ತವೆ. ನಿರಾತಂಕದಿಂದ ಸಾಗುತ್ತಾನೆ. ಮತ್ತೆ ಹಿಂದೆ ಬರುತ್ತಿದ್ದ ಹೆಜ್ಜೆಗಳು ಮಾಯವಾಗುತ್ತವೆ. ಅನುಮಾನದಿಂದ ಪ್ರಶ್ನಿಸುತ್ತಾನೆ. "ನನ್ನ ಹಿಂದೆಯೆ ಬರುತ್ತಿದ್ದ ನೀನು ಈಗ ಎಲ್ಲಿಗೆ ಹೋಗಿರುವೆ?" ಎಂದು. ಆಗ ಆ ಅಶರೀರವಾಣಿ ನುಡಿಯುತ್ತದೆ "ಮಗು, ನಿನಗೆ ನಡೆದು ದಣಿವಾಗಿರುವುದರಿಂದ ನಾನು ನಿನ್ನನ್ನು ಹೆಗಲ ಮೇಲೆ ಹೊತ್ತು ಸಾಗುತ್ತಿರುವೆ. ಆದ್ದರಿಂದ ಈಗ ಮೂಡುತ್ತಿರುವ ಹೆಜ್ಜೆಗಳು ನನ್ನವು." ಎಂದು. ಇದರಿಂದ ತಾನು ನಡೆಯುತ್ತಿರುವ ದಾರಿ ಸರಿಯಾಗಿದೆ ಎಂಬ ದೃಢ ಸಂಕಲ್ಪದಿಂದ ವಿಚಲಿತನಾಗದೆ ಗುರಿಯೆಡೆಗೆ ಸಾಗುತ್ತಾನೆ.

ತಮ್ಮ ಗುರು ತೋರಿದ್ದು ಮುಳ್ಳು ಕಲ್ಲಿನ ಹಾದಿ ಎಂದು ಗೊತ್ತಿದ್ದರೂ, ಅದೇ ದಾರಿಯಲ್ಲಿ ನಡೆಯುವ ಸಂಕಲ್ಪ ಮಾಡುತ್ತಾ ಯಾವುದೇ ಆಮಿಷಗಳಿಗೆ ಒಳಗಾಗದೆ, ಮಾನ ಅಪಮಾನಗಳಿಗೆ ಅಂಜದೆ, ತಮ್ಮ ದಾರಿಯಲ್ಲಿ ಯಶಸ್ವಿಯಾಗಿ ಸಾಗುತ್ತಾ ಇದೇ ಭಾದ್ರಪದ ಶುದ್ಧ ಚೌತಿಯಂದು 51 ಸಂವತ್ಸರಗಳನ್ನು ಪೂರೈಸಿ 52ನೇ ವರ್ಷಕ್ಕೆ ಪಾದಾರ್ಪಣ ಮಾಡುತ್ತಿರುವ ಪೂಜ್ಯ ಶ್ರೀ ಗಂಗಾ ಮಾತಾಜಿಯವರ ದಿವ್ಯ ಪಾದಾರವಿಂದಗಳಿಗೆ ನಮೋ ನಮಃ॥

****

ಬಸವ ಜ್ಯೋತಿ ಕಾರ್ಯಕ್ರಮಗಳು

- ವರದಿ: ಮಾತೆ ಜ್ಞಾನೇಶ್ವರಿ

'ಧರ್ಮದ ಕಡೆಗೆ ಜನ ಬರದಾಗ ಧರ್ಮವನ್ನೇ ಅವರೆಡೆಗೆ ಒಯ್ಯಬೇಕು' ಎಂಬ ಘೋಷಣೆಯೊಡನೆ ವಿಶ್ವಧರ್ಮ ಪ್ರವಚನ ಕಾರ್ಯಕ್ರಮವನ್ನು ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳವರು 1956ರಲ್ಲಿ ಸ್ವಯಂ ಪ್ರೇರಣೆಯಿಂದ ಜ್ಞಾನ ಸನ್ಯಾಸವನ್ನು ಸ್ವೀಕರಿಸಿ, ಆರಂಭಿಸಿದರು. ಕರ್ನಾಟಕ ರಾಜ್ಯದಾದ್ಯಂತ ಮಾತ್ರವಲ್ಲದೆ ನೆರೆಯ ಆಂಧ್ರ, ಮಹಾರಾಷ್ಟ್ರ, ತಮಿಳು ನಾಡಿನಲ್ಲಿಯೂ ಪ್ರವಾಸ ಮಾಡಿದರು. ನಂತರ ರಾಷ್ಟ್ರೀಯ ಬಸವ ದಳ ಎಂಬ ಸಂಘಟನೆ ಆರಂಭಿಸಿ ಪ್ರವಚನ ಮಾಡಿದಲ್ಲೆಲ್ಲ ಸ್ಥಾಪಿಸಿದರು. ಅನೇಕ ರಾಷ್ಟ್ರೀಯ ಬಸವ ದಳಗಳು ತುಂಬಾ ಉತ್ತಮವಾಗಿ ಕಾರ್ಯಮಾಡುತ್ತಿದ್ದು ಅವುಗಳು ಶ್ರಾವಣ ಮಾಸದಲ್ಲಿ ಹಮ್ಮಿಕೊಳ್ಳುತ್ತಿರುವ ಮತ್ತೊಂದು ವಿಶೇಷ ಕಾರ್ಯಕ್ರಮ ಬಸವ ಜ್ಯೋತಿ. 'ಮನೆ ಮನೆಗೆ ಬಸವ ಜ್ಯೋತಿ' ಎಂಬ ಈ ಕಾರ್ಯಕ್ರಮದ ಉದ್ದೇಶ ಭಕ್ತಿಯ ಉದ್ದೀಪನೆ ಮತ್ತು ಜ್ಞಾನದ ಜಾಗೃತಿ. ಕೆಲವು ರಾ.ಬ.ದಳಗಳು ವಿಶ್ವಧರ್ಮ ಪ್ರವಚನವನ್ನು ಹಮ್ಮಿಕೊಂಡರೆ, ಮತ್ತೆ ಕೆಲವು ಬಸವ ಜ್ಯೋತಿ ಕಾರ್ಯಕ್ರಮ ಹಮ್ಮಿಕೊಂಡು ದಿ. 11-9-2010 (ಗಣೇಶ ಚೌತಿ)ರಂದು ಪೂಜ್ಯ ಲಿಂ|| ಅಪ್ಪಾಜಿಯವರ 79ನೆಯ ಜಯಂತಿ, ಪೂಜ್ಯ ಗಂಗಾಮಾತಾಜಿಯವರ 52ನೆಯ ವರ್ಧಂತಿ, ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ, ಬಸವ ಜ್ಯೋತಿಯ ಸಮಾರೋಪವನ್ನು ಆಚರಿಸಿವೆ. ಗೋಕಾಕಿನಲ್ಲಿ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು, ಶೇಗುಣಸಿಯಲ್ಲಿ ಪೂಜ್ಯ ಶ್ರೀ ಸದ್ಗುರು ಮಾತೆ ಸತ್ಯಾದೇವಿ ಪ್ರವಚನ ಮಾಡಿದರು. ರಾಷ್ಟ್ರೀಯ ಬಸವ ದಳದ ಧಾರವಾಡ, ಹುಬ್ಬಳ್ಳಿ, ಹೈದರಾಬಾರದ್, ಬೆಂಗಳೂರು, ಬೀದರ, ಗುಲಬರ್ಗಾ, ಸವದತ್ತಿ, ಬೆಳಗಾಂ ಶಾಖೆಗಳವರು ಪ್ರತಿದಿವಸ ಒಂದೊಂದು ಮನೆಯಲ್ಲಿ ಬಸವ ಜ್ಯೋತಿ ಕಾರ್ಯಕ್ರಮ ನಡೆಸಿದರು. ಹೈದರಾಬಾದಿನಲ್ಲಿ ಪೂಜ್ಯ ಶ್ರೀ ಪ್ರಭುಲಿಂಗ ಸ್ವಾಮಿಗಳು ನೇತೃತ್ವ ವಹಿಸಿದ್ದರು, ಗುಲಬರ್ಗಾದಲ್ಲಿ ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳು ವಹಿಸಿದ್ದರು.

ಗುಲಬರ್ಗಾ ನಗರದ ನೃಪತುಂಗ ಕಾಲನಿಯಲ್ಲಿ ನೂತನ ಬಸವ ಮಂಟಪವು (ನಗರದಲ್ಲಿ ಎರಡನೆಯ ಬಸವ ಮಂಟಪ ಇದು ಎಂಬುದು ಹೆಮ್ಮೆಯ ವಿಷಯ) ಉದ್ಘಾಟನೆಗೊಂಡು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಹಸ್ತದಿಂದ ಗುರು ಬಸವಣ್ಣನವರ ಅಮೃತಶಿಲಾ ಮೂರ್ತಿಯ ಪ್ರತಿಷ್ಠಾಪನೆ ದಿ.11ರಂದು ನೆರವೇರಿತು. ದಿ.12-9-2010ರಂದು ಬಸವ ಕಲ್ಯಾಣದ ಮಹಾಮನೆಯಲ್ಲಿ ಪೂಜ್ಯ ಗುರುಗಳ ಜಯಂತಿ ಉತ್ಸವವು ಜಗದ್ಗುರು ಮಾತೆ ಮಹಾದೇವಿಯವರ ಸನ್ನಿಧಿಯಲ್ಲಿ ಜರುಗಿತು. ಬೀದರ ಜಿಲ್ಲೆಯ ಸಂತಪುರದ ಪ್ರವಚನ ಮಾಡುತ್ತಿರುವ ಪೂಜ್ಯ ಗಂಗಾ ಮಾತಾಜಿಯವರಿಗೆ ಪುಷ್ಪವೃಷ್ಟಿ, ಆರತಿ ಮಾಡಿ ಅವರ 52ನೆಯ ವರ್ಧಂತಿಯಂದು ಅಭಿನಂದಿಸಲಾಯಿತು. ಕಲ್ಯಾಣ ಪರ್ವದ ಪೂರ್ವ ಸಿದ್ಧತಾ ಸಭೆ ಜರುಗಿತು.

ಹುಬ್ಬಳ್ಳಿ ಕಾರ್ಯಕ್ರಮ, ದಿ: 26-09-2010

ಹುಬ್ಬಳ್ಳಿ ನಗರದ ಉಣಕಲ್‌ದಲ್ಲಿರುವ ರಾಷ್ಟ್ರೀಯ ಬಸವ ದಳದ ಬಸವ ಮಂಟಪದಲ್ಲಿ ದೇವ (ಭಾನು) ವಾರ, ದಿ.26-9-2010ರಂದು ಶ್ರೀಗುರು ಬಸವಣ್ಣನವರ ಅಮೃತ ಶಿಲಾ ಪುತ್ಥಳಿಯ ಪ್ರತಿಷ್ಠಾಪನೆಯು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಹಸ್ತದಿಂದ ಬೆಳಿಗ್ಗೆ 10-30ಕ್ಕೆ ನೆರವೇರಲಿದೆ. ನಂತರ ಕಾರ್ಯಕ್ರಮವಿದೆ. ಸರ್ವರಿಗೂ ಆದರದ ಸುಸ್ವಾಗತ



ವಿಶ್ವಗುರು ಬಸವಣ್ಣನವರ 815ನೆಯ ಲಿಂಗೈಕ್ಯ ಸಂಸ್ಮರಣೆ ಹಾಗೂ ಮೈಸೂರು ರಾಷ್ಟ್ರೀಯ ಬಸವ ದಳದ ವಾರ್ಷಿಕೋತ್ಸವ. ಮೈಸೂರು ನಗರದ ಮಹಾಪೌರರಾದ ಸಂದೇಶ್ ಸ್ವಾಮಿಯವರಿಂದ



ಗುಲಬರ್ಗಾದ ಮಹಾಂತ ನಗರದಲ್ಲಿರುವ ಬಸವ ಮಂಟಪದಲ್ಲಿ ಶ್ರಾವಣಮಾಸದ ಬಸವ ಜ್ಯೋತಿ ಸಮಾರೋಪ ಸಮಾರಂಭ



ಗುಲಬರ್ಗಾ ನಗರದ ನೃಪತುಂಗ ಕಾಲನಿಯಲ್ಲಿ ನೂತನ ಬಸವ ಮಂಟಪದ ಉದ್ಘಾಟನೆ, ದಿ.11-09-2010



ಶ್ರದ್ಧಾಂಜಲಿ

ಉಭಯ ಗಾನವಿಶಾರದರೂ
ಪ್ರವಚನ ಪ್ರವೀಣರು
ಪದ್ಮಭೂಷಣ ಪ್ರಶಸ್ತಿ ವಿಜೇತರು
ಅಂಧರಬಾಳಿಗೆ ಬೆಳಕು ನೀಡಿ
ಅನಾಥರಿಗೆ ಆಶ್ರಯವಾಗಿ
ದಿ.17-9-2010ರಂದು ಲಿಂಗೈಕ್ಯರಾಗಿ
ಕ್ರಿಯಾವಿಶ್ರಾಂತಿ ಹೊಂದಿದ ಗದಗಿನ
ಪೂಜ್ಯ ಡಾ.ಪುಟ್ಟರಾಜ ಗವಾಯಿಗಳಿಗೆ
ಅನಂತ ಶರಣು ಶರಣಾರ್ಥಿ

– ಪೂಜ್ಯ ಶ್ರೀಮನ್ನಿರಂಜನ ಮಹಾಜಗದ್ಗುರು
ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ

Kalyana Kirana Kannada Monthly September 2010
RNI No.19988/70, CPMG/KA/BGW-50 WPP 17R,Pages 32, Rs.10.00
Posted at Bangalore GPO on 3,10 and 20 of every month